ಕೊರವಂಜಿ

A. ANANTHIAH.

ಸಂಪುಟ ೨೧ ಜೂನ್ ೧೯೫೯ ಸಂಚಿಕೆ ೩

ಕುಹಕಿಡಿಗಳು

ನಮ್ಮ ಪಕ್ಕ ವಾಸ ಮಾಡ ಬಂದವರು ಮಂಗಳ ದಾಸರಂತೆ.

*   *   *   *

ಚೀಣೀಯರಿಗೆ ಬುದ್ಧಿ ಬರಲೆಂದು ಭಗವಾನ್ ಬುದ್ಧನನ್ನು ಪ್ರಾರ್ಥಿಸುತ್ತಿದ್ದಾರಂತೆ, ಡಲೈಲಾಮಾರವರು.

—ಅರ್ಥವಾಯಿತು ! !

*   *   *   *

ಜಾನ್ ಫಾಸ್ಟರ್ ಡಲ್ಲಸ್‌ರವರು ಕೀರ್ತಿಶೇಷರಾದಾಗ

—ಮೊಸಳೆಗಳು ಕೂಡ ಕಣ್ಣೀರು ಸುರಿಸಿತಂತೆ!

*   *   *   *

ಗದುಗಿನ ವೀರನಾರಾಯಣನ ಗುಡಿಯಲ್ಲಿ ದೇವರಿಗಿಂತ ಭಕ್ತರ ಪೂಜೆಯೇ ಮಿಗಿಲಂತೆ!

*   *   *   *

ಡಲ್ಲಸ್‌ರಿಗೆ ಬಂದ ಕ್ಯಾನ್ಸರ್ ಬೇನೆಗೆ ಕ್ರುಶ್ಚೆವ್ ಲವಣವೇ ಉತ್ತಮ ಮದ್ದಾಗಿತ್ತು ಎಂದೊಬ್ಬರು ಬರೆದಿದ್ದಾರೆ.

ಕೀರ್ತಿಶೇಷ ಐನ್‌ಸ್ಟೈನ್ ಅವರು, ರಷ್ಯಾದೇಶದಲ್ಲಿ ಹಿಂದಿನ ಜನ್ಮದಲ್ಲಿ ಹುಟ್ಟಿದ್ದರೆಂದೂ, ಆಗಲೇ ಅವರ ಸೂತ್ರಗಳನ್ನು ರಷ್ಯನ್ ಭಾಷೆಯಲ್ಲಿ ಪ್ರಕಟಿಸಿದ್ದರೆಂಬುದನ್ನು ರಷ್ಯನ್ನರು ಇನ್ನೂ ಹೊರಗೆಡವಿಲ್ಲವಂತೆ.

* * * *

ಕೋರ್ಟಿಗೆ ಹಾಜರಾಗಬೇಕಾದ ಸಾಕ್ಷಿಗಳೆಲ್ಲರೂ ಹಣ ತೆಗೆದುಕೊಂಡು ನಂತರ ಬೇಕಾದಾಗ ಮಾಯವಾಗುತ್ತಾರೆ ಎಂದೊಬ್ಬ ವಕೀಲರು ಬರೆದುಕೊಂಡಿದ್ದಾರೆ.

—ರಾಜಕೀಯದಂತೇ ನ್ಯಾಯಾಲಯಗಳು ಕೂಡ!

* * * *

ರಾಜಾಜೀಯವರು ನಿಶ್ಶಸ್ತ್ರೀಕರಣದ ವಿಚಾರದಲ್ಲಿ ಬರೆದ ಪತ್ರವನ್ನು ಅಮೆರಿಕಾದ ಶಾಸರ ಸಭೆಯಲ್ಲಿ ಪ್ರಕಟಿಸಲಾಯಿತಂತೆ.

—ಈಗ ನೆಹ್ರೂರವರ ಸರದಿ!

* * * *

ಉಡುಪಿಯಲ್ಲಿ ಆಯುರ್ವೇದ ಸಮ್ಮೇಳನವು ನಡೆದಾಗ ಬಡಿಸಿದ ಭೋಜನವನ್ನು ತಿಂದ ವೈದ್ಯರುಗಳು, ಈ ರೀತಿ ಎಲ್ಲರಿಗೂ ಊಟ ಸಿಕ್ಕಿದರೆ, ರೋಗಗಳೇ ಬರುವುದಿಲ್ಲ ಎಂದು ಹೇಳಿದರೆಂಬುದು ಖಚಿತವಲ್ಲವಂತೆ.

* * * *

ಕೊಡಲಿ ತೆಗೆದುಕೊಂಡೇ ಹಳ್ಳಿಯವನೊಬ್ಬನು ಹುಲಿಯೊಂದನ್ನು ಕೊಂದನಂತೆ.

—ಪರಶು ಹಳ್ಳಿಗ ಇರಬೇಕು!! ಹುಲಿ ಕ್ಷತ್ರಿಯ ಹುಲಿಯೇನೋ!!

* * * *

ಯಾರ ಜತೆಗೆ ಬೇಕಾದರೂ ಸೇರುತ್ತೇನೆ, ಸಹಕಾರ ಕೃಷಿಯನ್ನು ಎದುರಿಸಲು ಎಂದು ರಾಜಾಜಿಯವರು.

—ಗುರಿಗಿಂತ ಹಿಡಿವ ಹಾದಿ ಮುಖ್ಯ ಅಂತ ಬಾಪೂಜಿ ಹೇಳುತ್ತಿದ್ದರಲ್ಲವೇ?

* * * *

ಸಹಕಾರ ಪ್ರಯೋಗ (-ಜನ)

ಜಂಗಲೂರು ಬಿಟ್ಟು ನಾನು, ರಾಜ, ಚಂದಿ ಊಟದ ಹೊತ್ತಿಗೆ ನಿಟ್ಟೂರು ಸೇರಿದೆವು—ತಲಕಾಡು ಹಾದಿಯಲ್ಲಿ, ಹೆಸರು ಕೇಳಿಯೇ ನನ್ನ ಸ್ನೇಹಿತರಿಗೆ ಎಚ್ಚರಿಸಿದೆ—ಅಲ್ಲಿ ಹೆಚ್ಚು ಕಾಲ ಕಳೆಯಬಾರದೆಂದು ಹೂ—ಗುಟ್ಟಿದರು. ಅದೇ ಪ್ರಕಾರ—ನಿಟ್ಟೂರಿನ "ಸುಖಾಗಮನ ಲಂಚ್‌ಹೋಮ್‌ನಲ್ಲಿ ಊಟ ಮುಗಿಸಿ ಹೊರಟೆವು. ನಮ್ಮಲ್ಲಿ ರಾಜನಿಗೆ "ಕಾಡಾನೆ" ಸೇದುವ ಚಟ. ಅಪರೂಪಕ್ಕೆ ರಾಜನ ಮನಸ್ಸು ಶಾಂತವಾಗಿದ್ದು, ಕಲಿಯುಗದ ಕರ್ಣನ ಆವೇಶ ಬಂದರೆ—ಆಗ ಅವನು ಚಂದಿಗೆ ಒಂದು ಕಾಡಾನೆ ದಾನ ಮಾಡಿದರೆ—ಚಂದಿ ಒಂದು ದಂ ಎಳೆಯುವ ವಾಡಿಕೆ. ನನಗೆ—ಅಸ್ತಮಾ. ಉಸಿರು ಸಿಕ್ಕಿಕೊಂಡಾಗ ಅದನ್ನು ಬಿಡುಗಡೆ ಮಾಡೋಕೆ—ಆಗಾಗ ರಾಜನಿಂದ ಕಾಡಾನೆ ದಾನ ಪಡೆದು ಉಪಯೋಗಿಸುವ ವಾಡಿಕೆ. ಒಟ್ಟಿನಲ್ಲಿ ನಮ್ಮೆಲ್ಲರ ಹೋಮದ ಖರ್ಚು ರಾಜನದು. ಇದು ಲಾಗಾಯಿತಿನಿಂದ ಬಂದಿರುವ ಸಂಪ್ರದಾಯ. ಆದರೂ ನಿಟ್ಟೂರಿನಲ್ಲಿ ಊಟವಾದ ನಂತರ ಚಂದಿ—ಹೋಟೆಲು ಪಕ್ಕದಲ್ಲಿದ್ದ ಅಂಗಡಿಯಲ್ಲಿ ಒಂದು ಕಾಡಾನೆ ಪ್ಯಾಕು ಕೊಂಡು—ಅಂಗಡಿಯವನಿಗೆ ಎರಡು-ಹತ್ತು ನಯೇಪೈಸೆ ನಾಣ್ಯಗಳನ್ನು ಕೊಟ್ಟ. ಆತ ಆದನ್ನು ವಾಪಸ್ ಮಾಡಿದ.

"ಏನಾಗಿದೆಯಪ್ಪಾ ಈ ನಾಣ್ಯಗಳಿಗೆ?" ಅಂದ ಚಂದಿ.

"ಸ್ವಾಮಿ—ನಿಮಗೇನು ಭ್ರಮೆಯಾ? ಈ ಹೊಸ ದುಡ್ಡೆಲ್ಲ ಎಷ್ಟು ದಿನ ಇರುತ್ತೆಂತ ಮಾಡಿದ್ದೀರಿ? ನಂಗೇನೋ ಭಗವಂತ ನಿರ್ಮಿಸಿರೋ ಆಣೆಗಳನ್ನೇ ಕೊಡಿ" ಅಂದ.

ಚಂದಿ ಬೆರಗಾದ. ನಾನು ರಾಜ ಇಬ್ಬರೂ ಬೆರಗಾದೆವು. ರಾಜ ತನ್ನಲ್ಲಿದ್ದ ಆಣೆಗಳನ್ನು ಕೊಟ್ಟು ಪ್ಯಾಕನ್ನೂ ಚಂದಿಯನ್ನೂ ಬಿಡಿಸಿಕೊಂಡು ಬಂದ. ನಿಟ್ಟೂರು ಬಿಟ್ಟೆವು.

ನಾನು ಹಿಂದೆ ಹೇಳಿರುವ ಹಾಗೆ—ಯಾವಾಗಲೂ ನಮ್ಮ ಸಂಪ್ರದಾಯ—ರಾಜ ಚಂದಿ ಮುಂದೆ—ನಾನು ಹಿಂದೆ—ಪ್ರಯಾಣ ಮಾಡುವ ಪದ್ಧತಿ. ಇಂದು ಕೂಡ ಅದೇ ರೀತಿ ಸಾಗಿತು. ಚಂದಿ ರಾಜ ಮುಂದೆ- ನಾನು ಹಿಂದೆ. ಬೇರೆ

ಯಾವ ವಿಷಯವೂ ಪರಸ್ಪರ ನಮ್ಮಲ್ಲಿ ಮಾತಿಗೆ ಸಿಗದಿರಲು ನನ್ನ ಮನಸ್ಸಿನಲ್ಲಿ ಪ್ರಪಂಚದ ರಾಜಕೀಯ ಪರಿಸ್ಥಿತಿ ಆಟವಾಡತೊಡಗಿತು. ಡಲೆಸ್ ಕಥೆ ಮುಗಿಯಿತು. ಇನ್ನು—ಇನ್ನು ಪ್ರಪಂಚದ ರಾಜಕೀಯ ರಂಗ ಉತ್ತಮಗೊಂಡೀತೆ? ಕೃಶ್ಚೇವ್‌ನ ರೊಟ್ಟಿ ತುಪ್ಪದಲ್ಲಿ ಬಿತ್ತೆ? ನಾಸೆರ್—ಕೃಷೇನನ ಮುಂದೆ ನಿಂತಾನೆ? ಅಯೂಬ್ ಖಾನ್‌ರ ಬತ್ತಲಿಕೆಯಲ್ಲಿ ಬಾಣಗಳು ಕಡಿಮೆಯಾದಾವೆ? ಚಾಂಗ್-ಕೈ-ಷೆಕ್ ಗತಿ —ಪೆಸಿಫಿಕ್ಕೇ? ದಲೈಲಾಮಾ........ಥತ್!

ಎದುರುಗಡೆಯಿಂದ ಬಂದ ಎತ್ತಿನ ಗಾಡಿ ನನಗೆ ನಿಜಕ್ಕೂ ಕಾಣಲಿಲ್ಲ. ಸತ್ಯವಾಗಿ ಹೇಳುವುದಾದರೆ—ಗಾಡಿ ಎದುರುಗಡೆಯಿಂದಲೇ ಬಂದಿತೆಂದೂ ನನಗೆ ಗೊತ್ತಿಲ್ಲ. ಬಲಗಡೆಯಿಂದ ಬಂದಿರಬಹುದು. ಎಡಗಡೆಯಿಂದ ಬಂದಿದ್ದರೂ ಬಂದಿರಬಹುದು, ಅಥವಾ—ಹಿಂದಿನಿಂದಲೇ ಬಂದಿರಬಹುದು. ಆದರೂ ಆದರ ಚಾಲಕನ ಚಾತುರ್ಯದಿಂದ ನನ್ನ ವಾಹನಕ್ಕೂ ನನಗೂ ಅಷ್ಟೇನೂ ಪೆಟ್ಟಾಗಲಿಲ್ಲ. ಮುಂದಿನ ಚಕ್ರ,—ಗಾಡಿ ಚಕ್ರಕ್ಕೆ ತುಸ ತಾಗಿತು. ನಾನೂ ಹಾರಿದೆ. ಪ್ರಪಂಚದ ರಾಜಕೀಯ ಚಿಂತೆಯಲ್ಲಿ ನಾನು ಎಲ್ಲಿ ಹೋಗುತ್ತಿದ್ದೇನೆಂದು ನನಗೆ ಅರಿವಾಗಲಿಲ್ಲ. ಅಂತೂ ಹೆಚ್ಚಿಗೆ ನೋವಾಗದಿದ್ದಕ್ಕೆ ತೃಪ್ತಿಪಟ್ಟು—ಪುನಃ ವಾಹನವೇರಿದೆ.

ನನ್ನ ಸ್ನೇಹಿತರು ಇಬ್ಬರೂ—ಕಾಣಲಿಲ್ಲ. ರಸ್ತೆ ಏನೂ ಡೊಂಕಿಲ್ಲ. ನನ್ನ ಮುಂದೆ ಮೈಲಿ ಗಟ್ಟಲೆ ಹಾಸಿತ್ತು. ಆ ಕಡೆ ಈ ಕಡೆ—ಮರಿಗುಡ್ಡಗಳಿಲ್ಲದೆ ವಿಶಾಲವಾಗಿ—ಕೆಲವೇ ದಿನಗಳ ಹಿಂದೆ ಹೇರ್ ಕಟ್ ಮಾಡಿದ್ದ ಜಮಿನು ಹರಡಿತ್ತು. ಹಾಗಾಗಿ ರಾಜ-ಚಂದಿ ಘಾಳಿಯಲ್ಲಿ ಐಕ್ಯವಾಗಿರಬೇಕೇ ವಿನಹ ಅವರಿಗೆ ಬೇರಾವ ರೀತಿಯಲ್ಲೂ ಮಾಯವಾಗಲು ಮಾರ್ಗವೇ ಇಲ್ಲ—ಅದರಲ್ಲೂ ವಾಹನಗಳೊಂದಿಗೆ। ನನ್ನ ಲೆಕ್ಕಾಚಾರದ ಪ್ರಕಾರ—ಎತ್ತಿನಗಾಡಿ ಅಪಘಾತದಿಂದ ಕೇವಲ 10-15 ನಿಮಿಷಗಳು ತಡವಾಗಿರಬಹುದು. ಅಷ್ಟರಲ್ಲಿ ಅವರು ಇನ್ನೆಷ್ಟು ಮುಂದೆ ಹೋಗಿದ್ದಾರು? ಅಥವಾ—ಅವರೇ ಹಿಂದೆ ಇರಬಹುದೇ ಈ ತಲೆಕೆಳಗು ಪ್ರಪಂಚದಲ್ಲಿ ಏನಾದರೂ ಆಗಬಹುದು. ಅಲ್ಲೇ ನಿಂತೆ. ಹತ್ತು ನಿಮಿಷವಾಯ್ತು. ಕಾಲು ಘಂಟೆಯಾಯ್ತು. ರಾಜ ಚಂದಿಯ ಸುಳುವಿಲ್ಲ. ನನಗೆ ಸ್ವಲ್ಪ ಬೇಜಾರಾಯ್ತು. ಅವರಿಬ್ಬರೂ—ಮತ್ತೆಲ್ಲಿಯಾದರೂ ಹೋಗುವವರಿದ್ದರೆ—ನನಗೆ ಹೇಳಿ ಹೋಗಬಹುದಿತ್ತು—ಅನ್ನಿಸಿತು. ಅವರು ಬರಲಿ ಬರದಿರಲಿ—ನಮ್ಮ ತಲಕಾಡು ಯಾತ್ರೆಯನ್ನು ನಾನೊಬ್ಬನೇ ಮುಂದುವರಿಸೋಣವೆಂದು ಮನಸ್ಸು ಮಾಡಿದೆ—ಆದರೆ ನನ್ನ ಟಾಯಿಲೆಟ್ ಸೆಟ್ಟಿಲ್ಲ ಚಂದಿಯ ಸೈಕಲ್‌ನಲ್ಲಿದೆ. ರಾಜನ ಕೆಲವು ಬಟ್ಟೆಗಳು ನನ್ನ ಸೈಕಲ್ ಕ್ಯಾರಿಯರ್ ಮೇಲಿದೆ—ನಮ್ಮ ಸಹಕಾರ ಪ್ರಯೋಗ—ಒಬ್ಬರನ್ನೊಬ್ಬರು ಬಿಟ್ಟು ಹೋಗದಿರಲು ಈ ಪಿತೂರಿ ನಡೆಸಿದ ಚಂದಿಯಮೇಲೆ ವಿಪರೀತ ಕೋಪ ಬಂತು. ಕಡೆಗೆ—ಏನೂ ತೋಚದೆ ಅಲ್ಲಿದ್ದ

ಹುಣಸೇ ಮಠದ ಕೆಳಗೆ ಸೈಕಲ್ ಇಟ್ಟು, ನಾನೂ ಕುಳಿತೆ. ಸುಮಾರು ಒಂದು ಘಂಟೆ ತಳ್ಳಿತು. ನನ್ನ ಸ್ನೇಹಿತರ ಆಶೆಯನ್ನು ಪೂರ್ತಿಯಾಗಿ ಬಿಟ್ಟೆ. ನನ್ನ ಜೀವನದ ಮುಂದಿನ ಕಾರ್ಯಕ್ರಮವನ್ನು ಯೋಚಿಸುತ್ತಿದೆ. ಇನ್ನೇನು—ನಿರ್ಧಾರಕ್ಕೆ ಬರಬೇಕು—ಅಷ್ಟರಲ್ಲಿ ಯಾರೋ ಮೂವರು ಸೈಕಲ್ ವಾಹಕರು ಎದುರು ದಿಕ್ಕಿನಿಂದ ಬರುತ್ತಿರುವುದು ಕಂಡೆ. ತಕ್ಷಣ—ನನ್ನ ದೇಹದಲ್ಲಿ ಒಂದು ತರಹ ಮಿಂಚು ಹಾಯ್ದು ಹೋಗಾಯ್ತು. ಆ ಮೂವರೇ ನಾವು—ಅಂದುಕೊಂಡೆ. ಆದರೆ ನಾನು ಒಬ್ಬ ಇಲ್ಲೇ ಇದ್ದೇನೆ. ಹಾಗಾದರೆ—ಅವರು—ನಾನು ರಾಜ ಚಂದಿ—ಹೇಗಾದಾರು? ಹಾಗೇನಾದರೂ ಅವರು ನಾವೇ ಆಗಿದ್ದರೆ ನಾನು ಸುಳ್ಳಾಗ ಬೇಕು. ನಾನು—(ಚಿವುಟಿಕೊಂಡೆ)—ಸುಳ್ಳಳ್ಳ, ನಾನು ನಾನೇ—ಮತ್ತೆ ಆ ಮೂವರಲ್ಲಿ ಒಬ್ಬ ಯಾರು? ಪ್ರಾಯಶಃ—ಸರ್ ಸಿ. ವಿ. ರಾಮನ್‌ರವರು ಹೊಸದಾಗಿ ಕಂಡುಹಿಡಿದಿರೋ ಬೆಳಕಿನ ರೇಖೆಗಳು — ನನಗೂ ಕಂಡಿವೆಯೇ? ಇಷ್ಟೆಲ್ಲಾ ಯೋಚಿಸುತ್ತ ತಲೆ ಕೆಡಿಸಿಕೊಳ್ಳುವ ಹೊತ್ತಿಗೆ—ಆ ಮೂವರು ಬಂದು ನನ್ನನ್ನು ನೋಡಿ ವಾಹನಗಳಿಂದ ಇಳಿದರು. ಮೂವರೂ—ಬೇರೆ! ಒಬ್ಬ—"ನೀವೇನೇನ್ರಿ—ಕೇಶ?" ಅಂದ

"ಹೌದು—ಏಕೆ?" ಅಂತ ಕೇಳಿದೆ.

ಅವರು ಪರಸ್ಪರ ಅರ್ಥ ಗರ್ಭಿತವಾಗಿ ನೋಡಿಕೊಂಡರು.

"ನಿಮ್ಮ ಸ್ನೇಹಿತರಂತೆ—ಇಬ್ಬರು—ಇಲ್ಲಿಗೆ ನಾಲ್ಕು ಮೈಲಿರೋ ಸುಂಕದ ಹಳ್ಳಿಯಲ್ಲಿದ್ದಾರೆ. ಈಗಲೇ ಹೋದರೆ—ಸಿಕ್ತಾರಂತೆ. ನಾವೀಕಡೆ ಬರುತ್ತಿದ್ದುದ್ದನ್ನು ನೋಡಿ ನಿಮಗೆ ಸಮಾಚಾರ ಕೊಡಿ—ಅಂದರು."

ಅಲ್ಲಾ—ಎಂತಹ ವಿಚಿತ್ರ ಸ್ನೇಹಿತರು? — ರಾಜ ಚಂದಿ! ಇಷ್ಟು ದಿನ ಇವರ ಜೊತೆಯಲ್ಲಿ ಇವರಿಗಾಗಿ ಹೆಣಗಿ ಎಂತೆಂಥದೋ ಕಷ್ಟಗಳನ್ನನುಭವಿಸಿ ಇವರನ್ನು ಎಷ್ಟೋ ಸಂಕಟಗಳಿಂದ ಪಾರು ಮಾಡಿ—ಇಲ್ಲಿಯವರಿವಿಗೆ ಸುರಕ್ಷಿತವಾಗಿ ತಂದಿದ್ದಕ್ಕೆ—ಇದು ಇವರ ಕೃತಜ್ಞತೆ! ಸಾಧಾರಣ ಮನುಷ್ಯರಲ್ಲೇ ಇಷ್ಟು ಉದಾಶೀನತೆ ಇರುವುದಿದ್ದರೆ—ಇನ್ನು ಅಧಿಕಾರಿಗಳಲ್ಲಿ ರಾಜಕಾರಣಿಗಳಲ್ಲಿ ಎಷ್ಟು ಇರಬೇಕು? ಅವರನ್ನು ಬೈದು ಏನು ಪ್ರಯೋಜನ?

"ಆಗಲಿ—ನಾನು ಈಗಲೇ ಹೋಗಿ ಅವರಿಬ್ಬರನ್ನೂ....ಭೇಟಿ ಮಾಡ್ತೀನೆ.... ನೀವು ಯಾರು ತಿಳಿಯಲಿಲ್ಲ?" ಅಂದೆ.

"ನಾವು—ಇಗೋ ಇವರು ಶಂಕರರಾವ್, ಇವರು ಗಂಗಾಧರ್. ನಾನು—ವೆಂಕಟಾದ್ರಿ— ಏನೋ ಮನಸ್ಸಾಯ್ತು. ನಮ್ಮ ಕರ್ನಾಟಕದ ಮುಖ್ಯ ಸ್ಥಳಗಳ

ನ್ನೆಲ್ಲಾ ನೋಡೋಣ ಅಂತ—ಮೂರು ತಿಂಗಳು ರಜ ಪಡೆದು ಹೊರಟಿದ್ದೇವೆ—ನೀವು ತಲಕಾಡಿಗೆ ಹೊರಟಿರುವ ಹಾಗೆ" ಅಂದ—ವೆಂಕಟಾದ್ರಿ.

ನಾವು ನಿಜವಾಗಿ ಶೋಧನೆಮಾಡಿದ ಹೊರತು ಪ್ರಪಂಚದಲ್ಲಿ ಎಷ್ಟು ಜನ ಮೂರ್ಖರಿದ್ದಾರೆಂದು ತಿಳಿಯುವುದಿಲ್ಲ. ನಾನು ರಾಜ ಚಂದಿ—ಮೂವರನ್ನು ಬಿಟ್ಟು—ಬೇರೆ ಯಾರೂ ಈ ರೀತಿ ಸೈಕಲ್‌ಗಳನ್ನು ನಂಬಿ ಯಾತ್ರೆ ಹೊರಡುತ್ತಾರೆಂದು ನಾನು ತಿಳಿದಿರಲಿಲ್ಲ. ಇದರಿಂದ—ನಾವು ಜೀವಾದ್ಯಂತ ಪ್ರತಿಕ್ಷಣದಲ್ಲಿಯೂ ಕಲಿಯುತ್ತಿರುತ್ತೇವೆಂದು ಅರ್ಥವಾಗುತ್ತೆ. ಆದರೂ ಈ ಮೂವರನ್ನು ಪ್ರಾರಂಭದಲ್ಲಿಯೇ ನಿರಾಶೆಗೊಳಿಸಲು ನನಗೆ ಮನಸ್ಸು ಬರಲಿಲ್ಲ."

ಷಹಭಾಸ್—ನಿಮಗೆ ಒಳ್ಳೆಯದಾಗಲಿ. ನನ್ನ ಅನುಭವದಲ್ಲಿ—ಈ ಹಾಳು ಬಸ್ಸುಗಳ ನೂಕು ನುಗ್ಗಲಿನಲ್ಲಿ ಪ್ರಯಾಣ ಮಾಡುವುದಕ್ಕಿಂತ ಈ ರೀತಿ ಸ್ವತಂತ್ರರಾಗಿ ಸ್ವಂತ ಸೈಕಲ್‌ಗಳ ಮೇಲೆ ನಿಶ್ಚಿಂತೆಯಿಂದ ಪ್ರಯಾಣ ಮಾಡುವುದೇ ಒಳ್ಳೇದು. ನಮ್ಮ ಜನಕ್ಕೆ ಎಂದಿಗೆ ಬುದ್ಧಿ ಬರುತ್ತೋ ಗೊತ್ತಿಲ್ಲ. ಇಟಲಿ, ಜರ್ಮನಿ, ಅಮೆರಿಕಾ ದೇಶಗಳಲ್ಲಿ ಜನರು ..."

"ಇರಬಹುದ್ರೀ—ಆದರೆ ಯಾವ ಪುರುಷಾರ್ಥಕ್ಕಾಗಿರೀ ನಮ್ಮ ದೇಹಾನ ಈ ರೀತಿ ದಣಿಸಿಕೊಂಡು ಪ್ರಯಾಣ ಮಾಡಬೇಕು? ನಾವು ನಿಟ್ಟೂರಿನಲ್ಲಿ ಈ ಹಾಳು ಸೈಕಲ್‌ಗಳನ್ನು ಬಿಸಾಟು ಅಲ್ಲಿಂದ ಬಸ್ಸು ಹತ್ತುತ್ತೇವೆ. ನಮಗೆ—ಸುಂಕದ ಹಳ್ಳಿಯಿಂದ ನಾಲ್ಕು ಮೈಲಿ ಬಂದಿದ್ದೇ ಸಾಕಾಯ್ತು" ಅಂದ—ಗಂಗಾಧರ.

ಅವರ ದಾರಿ ಅವರು ಹಿಡಿದರು.

ಸುಂಕದ ಹಳ್ಳಿ—ನಾಲ್ಕು ಮೈಲಿ—ನನಗೆ ನಲವತ್ತು ಮೈಲಿಗಿಂತ ಹೆಚ್ಚಾಗಿ ಕಂಡಿತು. ಆಗನ್ನಿಸಿತು—ಈ ಜೀವನವನ್ನು ಏಕಾಂಗಿಯಾಗಿ ನಡೆಸುವುದು—ಅಸಾಧ್ಯವೆಂದು. ಹಾಗೂ—ಆ ಗಂಗಾಧರ—ಸೈಕಲ್‌ಗಳ ಬಗ್ಗೆ ಅಷ್ಟು ಕಟುವಾಗಿ ಟೀಕಿಸದಿದ್ದರೆ ಪ್ರಾಯಶಃ—ಇಪ್ಪತ್ತೇ ಮೈಲಿಯಂತೆ ಇರುತ್ತಿತ್ತೋ ಏನೋ? ಅಂತೂ ನಾನು ಸುಂಕದ ಹಳ್ಳಿ ಸೇರುವಾಗ—ಸಂಜೆಯಾಗಿತ್ತು. ಹಳ್ಳಿ ಸಣ್ಣದು. ಆದರೂ ಅದರಲ್ಲಿ ರಾಜ-ಚಂದಿಯನ್ನು ಹುಡುಕಬೇಕಾದರೆ—ಕತ್ತಲಾಯ್ತು. ಎಲ್ಲೂ ಸಿಗಲಿಲ್ಲ. ಊರಿನ ಬಸ್ ಸ್ಟಾಂಡು, ಸ್ಟಾಂಡಿನ ಹೋಟಲು, ಸ್ಕೂಲು, ಅಶ್ವತ್ಥಕಟ್ಟೆ, ಕೆರೆ—ಎಲ್ಲಾ ಹುಡುಕಿದೆ—ಎಲ್ಲೂ ಅವರ ಸುಳುವಿಲ್ಲ. ಸರಿ—ಸುಂಕದ ಹಳ್ಳಿಯನ್ನೂ ಬಿಟ್ಟು ಮುಂದೆ ಹೋಗಿದ್ದಾರು ಅಂತ ಸಂಶಯ ಪಡುತ್ತಿದ್ದಾಗ ವಾಯುವ್ಯ ದಿಕ್ಕಿನಿಂದ ರಾಜನ ಕೆಮ್ಮಿನ ಶಬ್ದ ಕೇಳಿಸಿತು. ಕಾಡಾನೆ ಮಾರ್ಕಿನ ಕೆಮ್ಮು. ಆ ಶಬ್ದವನ್ನೇ ಅನುಸರಿಸಿ ನಡೆದೆ. ಒಂದು ಮನೆಯ ಮಾಳಿಗೆಗೆ ದಾರಿ

ತೋರಿಸಿತು. ಮಾಳಿಗೆಯ ಮೇಲೆ ಇಸ್ಪೀಟ್ ಅಖಾಡದಲ್ಲಿ ನನ್ನ ಸ್ನೇಹಿತರಿಬ್ಬರನ್ನೂ ಗುರುತಿಸಿದೆ. ನಾನೂ ಪಕ್ಕದಲ್ಲಿಯೇ ಕುಳಿತೆ. ಇಬ್ಬರೂ ನನ್ನ ಕಡೆ ಕೂಡ ತಿರುಗಲಿಲ್ಲ. ಒಂದು ಘಂಟೆ ಹಾಗೇ ಕಳೆಯಿತು. ನನಗೆ ಬೇಜಾರಾಯಿತು ಇನ್ನೇನು—ಎದ್ದು ಕೆಳಗೆ ಬರುವುದೇ ಮೇಲೆಂದು ನಿರ್ಧರಿಸಿದೆ. ಆಗ ಚಂದಿ—

"ಎಲ್ಲಯ್ಯಾ—ಒಂದು ಮೂರು ರೂಪಾಯಿ ತಾ" ಅಂದ.

ಕೊಟ್ಟೆ.

ಆಟ ಮುಗಿದ ಮೇಲೆ—ಅದೇ ಮನೆಯಲ್ಲಿಯೇ—ಸುಂಕದ ಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಮನೆ ಅಂತ ತಿಳಿಯಿತು—ಅಧ್ಯಕ್ಷರ ಆತಿಥ್ಯ—ಊಟವಾಯ್ತು ಊಟವಾದ ನಂತರ—ಮಾತು ಅಲ್ಲ ಇಲ್ಲಿ ಅಡ್ಡಾಡಿ—ರಾಜಕೀಯ ವಿಚಾರದಲ್ಲಿ ನಿಂತಿತು.

"ಈ ಸಹಕಾರ ಪದ್ಧತಿ—ಕೃಷಿ-ಕೈಗಾರಿಕೆ ಇವುಗಳಲ್ಲಿ—ನಿಮ್ಮ ಅಭಿಪ್ರಾಯ ವೇನ್ರಿ?"

ಅಂತ ಕೇಳಿದರು ಅಧ್ಯಕ್ಷರು.

ನನಗೆ—ಆ ದಿನ ನನ್ನ ಸ್ನೇಹಿತರು ನನಗಿತ್ತಿದ್ದ ಸಹಕಾರ ಜ್ಞಾಪಕಕ್ಕೆ ಬಂದು —ಸಹಕಾರ ಪದ್ಧತಿಯನ್ನು ಛಿದ್ರಮಾಡಿ ಬಿಡಲೇ ಅನ್ನಿಸಿತು. ರಾಜ ಬಿಡಲಿಲ್ಲ.

"ಸಹಕಾರ ಪದ್ಧತಿ—ಅದು ಕೃಷಿಗಾರಿಕೆಯಲ್ಲಿ ಅನುಭವಕ್ಕೆ ಬಂದ ಹೊರತೂ —ಏನೂ ಹೇಳೋಕಾಗೊಲ್ಲ" ಅಂದ.

ಎಂದಿನಹಾಗೆ—ರಾಜನ ಮಾತು ಆಡ್ಡಗೋಡೆ ಮೇಲೆ ದೀಪವಿಟ್ಟಹಾಗೆ!

"ಅದು ಸ್ವಯಂವೇದ್ಯವಾದದ್ದೇ. ಆದರೂ—ಈಗಾಗಲೆ ಅದಕ್ಕೆ ಬೇಕಾದಷ್ಟು ಪ್ರತಿವಾದಗಳು ಬಂದಿರುವುದರಿಂದ—ಜನ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬರಬಹುದಲ್ಲವೇ ?" ಅಂದರು—ಅಧ್ಯಕ್ಷರು.

ನಾನು—ಈ ಬಗ್ಗೆ ಯೋಚಿಸಿರಲಿಲ್ಲ. ಸಹಕಾರ ಪದ್ಧತಿ ಬರಲಿ—ಒಡೆತನವೇ ಇರಲಿ—ಸಮಾಜ ಪದ್ಧತಿ ಬರಲಿ—ಒಂಡವಾಳಶಾಹಿ ಪದ್ಧತಿಯಾಗಲಿ—ಕಡೆಗೆ ರಾಷ್ಟ್ರೀಕರಣವಾಗಲಿ—ನನಗೆ ಕಿಂಚಿತ್ತಾದರೂ ಅನ್ವಯಿಸುವ ಸ್ಥಿತಿಯಲ್ಲಿ ನಾನಿಲ್ಲ. ನೂರಕ್ಕೆ ತೊಂಭತ್ತು ಜನ—ಆ ಸ್ಥಿತಿಯಲ್ಲಿಲ್ಲ. ನೂರಕ್ಕೆ ತೊಂಭತ್ತು ಮತದಾರರು ಆ ಸ್ಥಿತಿಯಲ್ಲಿಲ್ಲ. ನಮ್ಮ ಜೀವನವೆಲ್ಲಾ ಮಾರುಕಟ್ಟೆ—ಮನೆ ಇವೆರಡರ ನಡುವೆ ಇರುವಾಗ—ಯಾವ ಪದ್ಧತಿಯಿಂದಲೋ ಅಂಗಡಿಗೆ ಸಾಮಾನು ಬಂದರೆ ನಮಗೆ ತೃಪ್ತಿ. ಈ ವಾದ ಮುಂದಿಡಲು ನಾನು ಹವಣಿಸಿಕೊಂಡೆ. ಚಂದಿ ಬಿಡಲಿಲ್ಲ.

"ಈಗ ನೋಡಿ—ನಮ್ಮ ದೇಶದ ಎಲ್ಲಾ ರಾಜಕೀಯ ಸಂಸ್ಥೆಗಳು ಒಂದಲ್ಲಾ ಒಂದು ತರಹ ಸಹಕಾರ ಪದ್ಧತಿಯನ್ನೇ ಅನುಮೋದಿಸುತ್ತಿವೆ. ಕಾಂಗ್ರೆಸ್, ಸೋಷಿಯಲಿಸ್ಟ್—ಅಂದರೆ ಲೋಹಿಯಾ ಮೆಹ್ತಾ ಅಲ್ಲದೆ ಇನ್ನೂ ಅನೇಕ ಕೆಲಸ ವಿಲ್ಲದ ಬಡಗಿಗಳ ಸೋಷಿಯಲಿಸ್ಟ್ ಪಾರ್ಟಿಗಳು, ಕಮ್ಯೂನಿಸ್ಟರು—ಇದೇ ಸಹಕಾರ ಪದ್ಧತಿಯನ್ನು ಬೇರೆ ಬೇರೆ ಪ್ರಮಾಣದಲ್ಲಿ ಸೂಚಿಸುತ್ತಿರುವವರೇ ವಿನಹ—ವ್ಯಕ್ತಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ. ಆದರೂ ವ್ಯಕ್ತಿಯಿಂದ ಸಮಾಜವೇ ವಿನಹ ಸಮಾಜದಿಂದ ವ್ಯಕ್ತಿಯಲ್ಲ—" (ಇದು ನನಗೆ ಸ್ವಲ್ಪ ಕಬ್ಬಿಣದ ಕಡಲೆ ಯಾಯ್ತು !) "ಹೀಗಾಗಿ—ಜನರು ಎಲ್ಲಾ ಕಡೆಯಲ್ಲಿಯೂ ಸ್ವಲ್ಪ ಸ್ವಲ್ಪ ಬದಲಾ ವಣೆಯ ಕೆಂಪು ರಂಗನ್ನೇ ನೋಡುತ್ತಿದ್ದಾರೆಯೇ ವಿನಹ ಬೇರೆ ಬಣ್ಣವೇ ಕಾಣುತ್ತಿಲ್ಲ. ಸಹಕಾರ ಪದ್ಧತಿಗೆ ಬದಲಾದ ಬೇರೆ ಯೋಜನೆಯನ್ನು ಜನರ ಮುಂದೆ ಇಡುವುದು ನಾಯಕರ ಕರ್ತವ್ಯವೇ ಸರಿ — ಆದರೆ ಅವರಿಗೆ ಸಂಸ್ಥೆಯಿಂದ ಅಧಿಕಾರದಿಂದ ಉಚ್ಚಾಟನೆಯಾಗಬಹುದೆಂಬ ಭಯ. ಆದ್ದರಿಂದ—ನಾವು ನಮ್ಮ ಜೀವಮಾನ ವೆಲ್ಲಾ ಹೀಗೆ—ಈಗಿರುವ ಸ್ಥಿತಿಯಲ್ಲೇ ಕಳೆದು—ಮುಂದೆ ನಮ್ಮ ಮಕ್ಕಳೇ ಬೆಳೆದು ನಿರ್ಧರಿಸಿಕೊಂಡು ಹೋಗಲಿ ಅಂತ ಸುಮ್ಮನಿರುವುದು ಕ್ಷೇಮ" ಅಂದ.

ಚಂದಿಯ ಬಗ್ಗೆ—ಏನೇ ಇರಲಿ—ಇಷ್ಟು ಹೇಳಬಲ್ಲೆ. ಹೇಳುವುದರಲ್ಲಿ ಅರ್ಥವಿರಲಿ ಇಲ್ಲದಿರಲಿ—ಕಷ್ಟಪಟ್ಟು ವಿವರಿಸಿ ಹೇಳುತ್ತಾನೆ. ಅವನ ಮಾತು ಕೇಳಿ ನನಗೆಷ್ಟೋ ಬಾರಿ ಹೆಮ್ಮೆ ಬಂದಿದೆ. ರಾಜಕಾರಣಿಯ ರಕ್ತವಿದೆ.

ಅಧ್ಯಕ್ಷರಿಗೆ ಚಂದಿಯ ಮಾತು ಅರ್ಥವಾಯಿತೋ ಇಲ್ಲವೋ ನನಗೆ ಗೊತ್ತಿಲ್ಲ. ಆಕಳಿಸುತ್ತ ಎದ್ದುನಿಂತರು.

"ಏನೋ ಸ್ವಾಮಿ—ಈ ಸಹಕಾರ ಪದ್ಧತಿಗಳು ಜಾರಿಗೆ ಬಂದು ಅದಕ್ಕಾಗಿ ಇಲಾಖೆಗಳು ಬಂದು—ಆಡಳಿತದ ಖರ್ಚು ಆದಾಯಕ್ಕಿಂತ ಜಾಸ್ತಿಯಾಗಿ ಅದನ್ನೂ ನಮ್ಮ ತಲೆಗೆ ಕಟ್ಟಿದರೆ—ನಾವು ಸುಖವಾಗಿ ಗೆಡ್ಡೆಗೆಣಸು ಹುಡುಕುತ್ತ ಕಾಡಿಗೆ ಹೋಗೋದು ಮೇಲು."

—ಅನ್ನುತ್ತಾ ನಮಗೆ ಮುಲಗಲು ಜಾಗ ಮಾಡಿಕೊಟ್ಟು, ಮಾಳಿಗೆ ಹತ್ತಿದರು.

—ಕೇಫ

ಗಾಂಪರ ಗುಂಪು

"ಮೂರು ನಾಮ ನಾಳೆ"

ಚಾಪೆಯಮೇಲಿಂದ ಎದ್ದ ಮರುಳ ಅಂಗೈ ನೋಡಿಕೊಂಡು—'ಕರಾಗ್ರೆ' ಹೇಳಿ ಎದುರಿಗಿದ್ದ ವೆಂಕಟರಮಣಸ್ವಾಮಿಗೆ ಕೈ ಮುಗಿದು ಎದ್ದ. ಕಿರ್ ಎಂದು ಮಠದ ಬಾಗಿಲು ತೆಗೆಯಿತು. ಕೈಲಿದ್ದ ಶೀಮೆ ಎಣ್ಣೆ ಬುಡ್ಡಿಯ ಬೆಳಕನ್ನು ಹಿಡಿದು ತೆಗೆದ ಬಾಗಿಲ ಬಳಿ ಬಂದ. ಕೆಮ್ಮಣ್ಣು ಬಳಿದ ಬಾಗಿಲಮೇಲೆ ಸುಣ್ಣದಲ್ಲಿ ಏನೋ ಬರೆದಿತ್ತು. ಬುಡ್ಡಿ ಎತ್ತಿ ನೋಡಿದ. " \|/ ನಾಳೆ " ಎಂದು ಬರೆದಿತ್ತು. "ಮಾಟವೋ—ಮೋಸವೋ—ಮಸಲತ್ತೋ—ಇದೇನು ಲಂಡನ್ನಿಗೆ ಹೊರಡುವ ಮುಂಚೆ ಮೂರು ನಾಮ ?" ಎಂದೆಲ್ಲಾ ಯೋಚಿಸಿದ. ಗುರುಗಳ ಕಡೆ ನೋಡಿದ. ನಿರ್ಯೋಚನೆಯ—ಕಳೆಯೇ ಇಲ್ಲದ ಜೋಳು ಮುಖವನ್ನು ಬಿಟ್ಟು ಕತ್ತಿನವರಿಗೆ ಕೆಂಪು ಶಾಲು ಹೊದ್ದಿದ್ದರು. ದರ್ಭಾಸನದಮೇಲೆ ಕಂಬಳಿ—ಅದರಮೇಲೆ ಹಚ್ಚಡ ಅದರಮೇಲಿದ್ದ ಹಾಸಿಗೆ—ಹಾಸಿಗೆಮೇಲೆ ಗಾಂಪರೊಡೆಯರು—ಅವರಮೇಲೆ ಶಾಲು—ಎಲ್ಲಾ ಒಂದು ರೀತಿಯ ಅಚ್ಚುಕಟ್ಟುತನ ಕಾಣಿಸುತ್ತಿತ್ತು.

ಹಾಗೇ ಬಾಗಿಲನ್ನೂ—ಗುರುಗಳ ಹಣೆಯನ್ನೂ ನೋಡಿದ ಮರುಳ. "ಈ ಮೂರು ನಾಮ ಗುರುಗಳ ಹಣೆಗೆ ಎಷ್ಟು ಚೆನ್ನಾಗಿ ಒಪ್ಪುತ್ತದೆ! ಈ ಬಾಗಿಲೇ ಅವರ ಹಣೆ ಆಗಿದ್ದಿದ್ದರೆ !"ಎಂದು ಒಂದು ಕ್ಷಣ ಅವನ ಮರುಳು ಮನಸ್ಸಿಗೆ ಹೊಳೆಯಿತು. ಅದೇ ಬಾಗಿಲು—ಆ ಬುಡ್ಡಿ ದೀಪ—ಬೆಳಗಿನಜಾವದ ನಿದ್ರೆಗಣ್ಣು—ಈಗೊಂದುವೆಲ್ಲಾ ಸೇರಿ ಆ ಬಾಗಿಲೇ ಗುರುಗಳ ಹಣೆ—ಅಲ್ಲಿ ಮಲಗಿರುವ ಗುರುಗಳೇ ಬಾಗಿಲು ಎಂದು ಏನೇನೋ ವಿಚಿತ್ರ ಯೋಚನಾತರಂಗ ಮಿದುಳಿಲ್ಲದ ಅವನ ತಲೆಯಲ್ಲಿ ಮೂಡಿತು.

"ಗುರುಗಳೇ ಇಲ್ಲಿ ನೋಡಿ— ನಿಮ್ಮ ಹಣೆಯಲ್ಲಿ ಮೂರು ನಾಮ ನಾಳೆ—" ಎಂದು ಕೂಗಿದ.

ಈ ಕೂಗಿಗೆ ಗುರುಗಳು ನಿದ್ರೆಯಿಂದ ಎಚ್ಚೆತ್ತರು. ತೂಕಡಿಸುತ್ತಾ ಪಕ್ಕದಲ್ಲಿ ಗಾಳಿ ಹಾಕುತ್ತಿದ್ದ ಮಡ್ಡಿಯನ್ನು ನೋಡಿದರು. ರಾತ್ರಿಯೆಲ್ಲಾ ಗಾಳಿ ಹಾಕಿದ ಇವನ ಭಕ್ತಿಗೆ ಮೆಚ್ಚಿ ಅವನ ಕೈಯ ಬೀಸಣಿಗೆ ಕಿತ್ತಿಸಿದು ಹಾಗೇ ಅವನನ್ನು ಗೋಡೆಗೊರಗಿಸಿ ಮರುಳನಿದ್ದಲ್ಲಿಗೆ ಬಂದರು.

"ಏನು ಮರುಳಾ"

"ಮೂರು ನಾಮ ಗುರುಗಳೇ"

"ಎಲ್ಲಿಯೋ—ಕನಸೇನೋ"

"ಇಲ್ಲ ಗುರುಗಳೇ—ನಿಮ್ಮ ಹಣೆಯಲ್ಲಿ ಮೂರುನಾಮ ನಾಳೆ ಗುರುಗಳೇ"

"ಛಿ—ಮರುಳೇ—ಮಡ್ಡಿಯಹಾಗೆ ನಿನಗೂ ನಿದ್ರೆಗಣ್ಣೇನು—ಹೀಗ್ಯಾತಕ್ಕೆ ಬುದ್ಧಿ ಹಿಡಿದು ಕೂಗಾಡ್ತಿದ್ದೀಯ—"

"ಕೂಗಾಟ ಅಲ್ಲ ಗಾಂಪರೊಡೆಯರೇ—ನಿಮಗೆ ಕಾಣೋದಿಲ್ವೆ—ಮೂರು ನಾಮ ನಾಳೆ—ಅಯ್ಯೋ—ಬೆಳಗಾಗಿ ಏಳುತ್ತಲೇ ಕಂಡೆ—ಭಯವಾಯ್ತು ಕೂಗಿದೆ."

—ಆಗ ಗುರುಗಳಿಗೆ ಕಂಡಿತು ಬಾಗಿಲಮೇಲಿದ್ದ ಮೂರುನಾಮ ನಾಳೆ— ಎಂಬ ಲಿಖಿತ. ಅವರಿಗೂ ಇದು ಅರ್ಥವಾಗಲಿಲ್ಲ.

"ಗುರುಗಳೇ ಏನು ಇದರ ಅರ್ಥ"

"ಮರುಳಾ—ಅದನ್ನೇ ಯೋಚಿಸುತ್ತಾ ಇದ್ದೆ. ಲಂಡನ್ನಿಗೆ ಹೊರಡುವ ದಿನ ಹತ್ತಿರ ಬಂದು ನಾಡಿದ್ದು ಹೊರಡುವುದೆಂದು ಇರುವಾಗ ಈ ಮೂರು ನಾಮದ ಗುರುತು ಏನಿದು ? ನಾಳೆ ಎಂದರೇನು ?"

"ಅದೂ ನಿಮ್ಮ ಹಣೆಗೆ ನಾಮವೆಂದರೆ—ನಮಗೂ ನಾಮವೇ—ಅಯ್ಯೋ ಲಂಡನ್ನು ಕನಸಾಯ್ತು "

"ನಿನ್ನ ತಲೆ—ಈ ಮುಂಬಾಗಿಲು ನನ್ನ ಹಣೆಯೆ ? ಇದಕ್ಕೆ ಬೇರೆ ಅರ್ಥವೇ ಇರಬೇಕು."

"ಗುರುಗಳೇ—ಪಕ್ಕದ ಮನೆಯ ಪಂಡಿತರಲ್ಲಿ ಇದರ ವ್ಯಾಖ್ಯಾನ ಕೇಳಿದರೆ ಹೇಗೆ ?"

"ನಾವೇ ಯೋಚಿಸುವೆವು—ಸ್ನಾನ ಆಹನ್ನಿಕ ಆದಮೇಲೆ ಉಪನ್ಯಾಸಕ್ಕೆ ಅಣಿಮಾಡು ನಾನೇ ಇದರ ಅರ್ಥ ಹೇಳುವೆವು...."

"ಬೇಡ ಗುರುಗಳೇ-ಯಾರಾದರು ತಿಳಿದವರನ್ನು ಕೇಳಿದರೇ ನಮ್ಮ ಮಠಕ್ಕೆ ಶ್ರೇಯಸ್ಸು—ಅಂತ ನನ್ನ ಅಭಿಪ್ರಾಯ."

ಪ್ರಾಯದವನಾದ ನಿನ್ನ ಅಭಿಪ್ರಾಯಕ್ಕೆ ಬೆಲೆ ನಾವು ಕೊಡೆವು—ನಡಿ ನೀರೊಲೆಗೆ ಉರಿ ಹಾಕು."

—ಎಂದು ಅವನನ್ನು ಬುಡ್ಡಿ ಸಮೇತ ಸ್ನಾನಗೃಹಕ್ಕೆ ಅಟ್ಟಿದರು. ಕೋಳಿ ಕೂಗಿತು. ಮಡ್ಡಿ—ಮಂಕರು ಎದ್ದು ಬುಟ್ಟಿ ಹಿಡಿದು ಪೂಜೆಗೆ ಹೂವು ತರುವ (ಕದಿವ?) ನೆಪದಿಂದ ಹೋಟಲಿಗೆ ಹೋದರು.

ಗಾಂಪರೊಡೆಯರು ಮಠದ ಕಟ್ಟೆಯಮೇಲೆ ತಲೆಯಮೇಲೆ ಕೈ ಹೊತ್ತು ಮೂರು ನಾಮ ನಾಳೆಗಳ ಬಗ್ಗೆ ಯೋಚಿಸುತ್ತಾ ಕುಳಿತರು

"ಮೂರು ನಾಮ—ಬ್ರಹ್ಮ—ವಿಷ್ಣು— ಮಹೇಶ್ವರ. ಸೃಷ್ಟಿ—ಸ್ಥಿತಿ—ಲಯ. ತ್ರಿಕರಣ ಶುದ್ಧಿ. ಮನೋ—ವಾಕ್—ಕಾಯ ಶುದ್ಧಿ, ಮುಂಜಾನೆ—ಮಧ್ಯಾಹ್ನ—ಸಂಜೆ. ಈ ಮೂರು ಅವಸ್ಥೆಗಳು ಎಲ್ಲರಿಗೂ ಅಂಟಿದ್ದು. ಹುಟ್ಟು—ಬದುಕು—ಸಾವು....ಆದರೆ ಮಠಕ್ಕೆ ಅಳಿವುಂಟೆ? ಗುರು ಪರಂಪರೆ ಬರಬಹುದು ಹೋಗಬಹುದು—ಶಿಷ್ಯರು ಸೇರಬಹುದು ಹೋಗಬಹುದು ಆದರೆ ಮಠ ಅದರ ತತ್ವ—ಅದರ ಗಾಂಪತ್ವದ ಹಿರಿಮೆ ಶಾಶ್ವತ ಅಲ್ಲವೇ? ಈ ಗಾಂಪಮಠಕ್ಕೆ ಮನೋ—ವಾಕ್—ಕಾಯ ಶುದ್ಧಿ ಇತ್ತು. ಅನೇಕ ರಾಜಕೀಯ ಮಠಗಳಿಗಿಂತ ಇದು ಶುದ್ಧವಿತ್ತು. ಗೌರವವಿತ್ತು—ಆದರೆ ಈ ಮಠಕ್ಕೆ ಮೂರು ನಾಮ ನಾಳೆ?

ಹತ್ತು ಕಂಪನಿಯ ಡೈರೆಕ್ಟರು—ನೂರು ಸಂಸ್ಥೆಗಳ ಪಾಲುದಾರ ಸಾವಿರ ಸಂಸಾರಗಳ ದುಡಿಮೆಯಿಂದ ಮಹಲು ಕಟ್ಟಿಸಿಕೊಂಡು ಮನೋ—ವಾಕ್—ಕಾಯ ಶುದ್ಧಿ ಶೂನ್ಯವಾಗಿದ್ದ ಒಂದು ಮಠದ ಕೇಡಿ ಗುರು ಅನೇಕ ಬಾರಿ ಭೂಪ್ರದಕ್ಷಿಣೆ ಮಾಡಿ ಬಂದಿದ್ದ. ಅವನು ಫೋನು ಮಾಡಿದರೆ ಮನೆ ಮುಂದೇ ಏರೋಪ್ಲೇನು ಬಂದುಬಿಡುತ್ತದೆ. ಅದೇ ಕೇವಲ ಯಾವ ಗಲಾಟೆಗೂ ಸೇರದ ಈ ಗಾಂಪ ಮಠದವರು ಹೋಗಬೇಕಾದರೆ ಎಷ್ಟು ಕಷ್ಟ? ಎಷ್ಟು ನಷ್ಟ—ಕಿರಿ ಕಿರಿ ಕೇಳುವವರೇ ಇಲ್ಲವೆ?"

—ಎಂಬ ಮಹತ್ತರ ಯೋಚನೆ ಅವರ ತಲೆಯಲ್ಲಿ ಮೂಡಿತು. "ಕಾರಿನಲ್ಲಿ ಬರುವವರಿಗೆ ಆಗುವಷ್ಟು ಸುಲಭ ವ್ಯವಹಾರ ಜಂಗಮಯ್ಯಗಳಿಗೆ ಆದೀತೆ? ಬಡವರಿಗೆಲ್ಲಾ ಮಡುಗುವವರೇ—ಹೂಂ—ನಮಗೆ ಸ್ವರ್ಲಿಂಗ ಕೊಡಲಿಕ್ಕೆ ಏಳು ಗೋಳು—ಅದೇ ಅವರಿಗೆ ಬೇಕಾದವರಿಗೆ—ಅರ್ಥಾತ ಅವರ ಮಠದವರು ಲೋಕವನ್ನು ಸುತ್ತಿ ಜೊತೆಗೂ ತರುವಷ್ಟು ಸ್ವರ್ಲಿಂಗು—ಡಾಲರ್ರು—ಅಯ್ಯೋ ಕಾಲವೇ—"ಎಂದು ಮರುಗಿದರು. "ಖಂಡಿತ ತಮ್ಮ ವಿದೇಶ ಪ್ರಯಾಣಕ್ಕೆ ಮೂರು ನಾಮ—" ಎಂದು ಖಚಿತವಾಗಿ ಅತ್ತರು. ಮೂರು ನಾಮದ್ದೇನೋ

ವ್ಯಾಖ್ಯಾನ ಮಾಡಿದ್ದಾಯಿತು. ಇನ್ನು "ನಾಳೆ" ಏನದು? "Tomorrow Never comes" ಅಂತ ಮಡ್ಡಿ ಒಮ್ಮೆ ಹೇಳಿದ್ದ. 'ಆ ನಾಳೆ ಇನ್ನಿಲ್ಲ' ಎಂದು ಅರ್ಥವೇ?

ಇಂದಿನದೆಲ್ಲವನ್ನೂ ಅವರೇ ಆ ರಾಜಕೀಯ ಮತದವರೇ ಇಟ್ಟುಕೊಂಡಿದ್ದಾರೆ ನಮಗೆ ಇಂದಂತೂ ಬೇಡ ನಾಳೆಯೂ ಬೇಡವೇ? ಹಿಂದಿನ ಎಲ್ಲ ದಿನಗಳೂ ರಾಜರುಗಳದಾಯಿತು, ಇಂದಿನ ದಿನಗಳೆಲ್ಲ ಆಳುವ ಮತದವರದಾಯಿತು—ಮುಂದಿನಗಳೂ ನಮಗೆ ಬೇಡವೆ? "ಹಿಂದು—ಮುಂದು—" ಈ ಮೂರಕ್ಕೂ ಮೂರು ನಾಮವೆ? ನಮ್ಮ ಮತವೂ ಬಡ ಮತ ಆದರೆ ನೈತಿಕ ಮಟ್ಟದಲ್ಲಿ ಬಲು ಹೆಚ್ಚು ಎತ್ತರದಲ್ಲಿದೆ. ಚಾಕಚಕ್ಯ ರಾಜಕಾರಣ ಬೇಕಲ್ಲದೆ ನೈತಿಕ ಸತ್ವ ಯಾರಿಗೆ ಬೇಕು? ಶಿಕ್ಕಿದವರಿಗೆ ಶೀರುಂಡೆ—ಬಾಯಿದ್ದವನು ಬರದಲ್ಲಿ ಬಂಗಲೆ ಕಟ್ಟಿಸಿದ."

—ಎಂದು ಏನೇನೋ ಎಂದೂ ಇಲ್ಲದ ಆಂದೋಳನ ಅವರ ನೆತ್ತಿಯಲ್ಲಿ ಆಯಿತು. ಸೂರ್ಯೋದಯವಾಗಿ ಮಡ್ಡಿ—ಮಂಕರು ಹೂವು ತಂದರು – ಮರುಳ ನೀರು ಕಾದಿದೆ ಗುರುಗಳೇ ಎಂದ.

"ಗುರು ಗಾಂಪಾ ಸುಖೀಭವ" ಎಂಬ ಕೂಗು ಕೇಳಿ ಬಂತು. ಹಾಗೇ ತಿರುಗಿ ನೋಡಿದರು ಮಠವಿದ್ದ ರಸ್ತೆಯ ಜನರೆಲ್ಲಾ ಬಂದು ನಿಂತಿದ್ದರು.

ಇದೇನೆಂದು ಗಾಂಪರೊಡೆಯರಿಗೆ ಕ್ಷಣ ತಬ್ಬಿಬ್ಬಾಯಿತು.

"ಏನು ವಿಷಯ—ಗೋಪಣ್ಣಾ"—ಎಂದರು.

"ಏನು ಹೇಳೋಣ ಗುರುಗಳೇ—ಇಡೀ ನಮ್ಮ ಬೀದಿಯ ಎಲ್ಲಾ ಮನೆ ಮುಂಬಾಗಿಲಮೇಲೂ ಮೂರು ನಾಮ ನಾಳೆ ಹಾಕಿದ್ದಾರೆ—ನಮಗೆ ಕಳ್ಳರು ಮಾಡಿಕೊಂಡ ಗುರ್ತೇ ಮುನ್ಸೂಚನೆಯೇ ಅನ್ನೋ ಸಂದೇಹ. ಠಕ್ಕರು ಕಳ್ಳರು ನಮಗೆ ಇನ್ನೂ ತಲೆಗಂದಾಯ ಹಾಕಿ ನಾಳೆಗಳೆಲ್ಲಾ ಮೂರು ನಾಮ ಎಂಬ ಸೂಚನೆಯೇ? ಇದರ ಅರ್ಥವೇನು?"—ಎಂದು ಗೋಪಣ್ಣ ಕೇಳಿದ.

ಗಾಂಪರೊಡೆಯರಿಗೆ ನೆಮ್ಮದಿಯಾಯಿತು. ತಮ್ಮ ಮಠಕ್ಕೆ ಮಾತ್ರ ಮೂರು ನಾಮವಲ್ಲ—ನಮ್ಮ ಕೇರಿ ಕೇರಿಗೇ—ಊರು ಊರಿಗೇ—ಮೂರು ನಾಮ ನಾಳೆ ಎಂದು ಒಂದು ವಿಧದ ಶುಭ ಸೂಚನೆ. ಮಧ್ಯದ ಕೆಂಪು ನಾಮ ಇದೆ ನೋಡಿ ಅದು ಮುಖ್ಯ. ಕೆಂಪು ಬಣ್ಣ ಕೆಮ್ಮಣ್ಣು—ಒಂದು ವಿಧದ ಗೊಬ್ಬರದ ಮಣ್ಣು—ಇದೆಲ್ಲಾ ಮಣ್ಣು ನೆಲ ಎಲ್ಲರಿಗೂ ಸಮ ಸಮ ಹಂಚು ಮುನ್ಸೂಚನೆ—ಕಾರ್ಮಿಕರಿಗೆ—ರೈತರಿಗೆ—ಕೆಂಪುಬಣ್ಣಕ್ಕೆ ಜಿಂದಾಬಾದ್"

—ಎಂದು ಒಂದು ಕೆಂಚಗಿನ ಎಳೆಯ ಹುಡುಗ ಕೂಗಿದ. ಅವನನ್ನೇ ನೋಡಿದಾಗ ಕಣ್ಣು ಕೆಂಪಗಿತ್ತು. ಗುರುಗಾಂಪರಿಗೆ ಅವನನ್ನೂ ಮಠಕ್ಕೆ ಸೇರಿಸಿಕೊಳ್ಳುವ ಆಸೆ ಆಯ್ತು. ಆದರೆ ಆವೇಶದಲ್ಲಿ ಕೂಗಿದ ಅವನು ಗಿರಣಿ ಸಂಪು ಹೂಡಿಸುವನೋ ಎಂಬಂತೆ ಹೊರಟೇಹೋದ.

“ಅವನ ಕೂಗು ಬಿಡಿ”—ಎಂದರು ಗಾಂಧಿ ಟೋಪಿಯ ಪಂಡಿತರೊಬ್ಬರು.

ಎಲ್ಲಿಗೋ ಹೋಗಿದ್ದ ಮಡೆಯ ಬಂದ. ಸೇರಿದ್ದ ಗುಂಪು ಬೇಧಿಸಿಕೊಂಡು ಮುಂಬಾಗಿಲನ್ನು ನೋಡಿದ. ಗಾಪರೊಡೆಯರು “ಮಡೆಯಾ—ಎಲ್ಲಿಗೆ ಹೋಗಿದ್ದಿ—ಆ ಬಾಗಿಲನ್ನು ನೋಡಿದೆಯಾ?” ಎಂದರು.

“ನೋಡಿದೆ ಗುರುಗಳೆ—ನಾನು ರಾತ್ರಿ ಒಂದು ಘಂಟೆಯ ಸಮಯಕ್ಕೆ ಹೊರಗೆ ಬಂದಿದ್ದೆ. ಎದುರು ಮನೆಯ ಬಾಗಿಲಮೇಲೆ ಮೂರು ನಾಮ ನಾಳೆ ಬರೆದಿದ್ದರು....ಯಾರೋ ಕಳ್ಳರು ಗುರ್ತು ಮಾಡಿಕೊಂಡಿರಬೇಕೆಂದು ನಾನು ಆ ಕಳ್ಳರಿಗೆ ಗುರ್ತು ಸಿಗದಂತೆ ಆಲಿಬಾಬಾ ನಲವತ್ತು ಕಳ್ಳರ ಕಥೆ ನೆನಪಾಗಿ ಅದೇ ಮೂರು ನಾಮ ನಾಳೆಯ ಗುರ್ತನ್ನು ಊರಿನ ಬಾಗಿಲ ಮೇಲೆಲ್ಲಾ ಹಾಕಿ ಬಂದೆ—ಸುಸ್ತು—ಹಸಿವು—ಊಟ—ತಿಂಡಿ....”—ಎಂದು ಅಡಿಗೇ ಮನೆಗೆ ಓಡಿ ಹೋದ.

ಗುರುಗಳು ನಕ್ಕರು. ಸೇರಿದ ಮಂದಿ ನಕ್ಕರು. “ಇದು ಕೂಗಲಮ್ಮ ಎನ್ನೊ ದೆವ್ವದ ರಕ್ಷೆ....ಮಲೆನಾಡ ಕಡೆಯವರಾದ ನಾವು ನಿನ್ನೆ ನಮ್ಮ ಮನೆ ಬಾಗಿಲಿಗೆ ಈ ಗುರ್ತು ಹಾಕಿದೆವು”—ಎಂದು ಮಠದ ಎದುರು ಮನೆಯ ಮುದುಕರು ಹೇಳಿದರು. “ಮೂರು ನಾಮ ನಾಳೆಗೂ—ನಮ್ಮ ಲಂಡನ್ನು ಯಾತ್ರೆಗೂ—ಏನೂ ಸಂಬಂಧವಿಲ್ಲ” ವೆಂದುಕೊಂಡು ಗಾಂಪರೊಡೆಯರು ಸ್ನಾನ ಆಹ್ನಿಕಗಳಿಗೆ ಹೋದರು—ಗುಂಪು ಚದುರಿತು.

—**ದಾಶರಥಿ ದೀಕ್ಷಿತ್**

ಅಧಿಕಾರಮದದಿಂದ ಆತ ಹಾಗಂದರೆ —ಅಧಿಕಾರವಿಲ್ಲದ ಪರಿತಾಪದಿಂದ ಈಗ ಹೀಗಂದಾನು, ಎಂದೊಬ್ಬರು ಟೀಕಿಸಿದ್ದಾರೆ.

—ಆತ, ಈತ ಯಾರು ಎಂದು ಟೀಕಾಕಾರರು ಹೇಳಲಿಲ್ಲ! ಆದರೂ ಅರ್ಥವಾಗುತ್ತೆ ಅಲ್ಲವೇ?

ಕುಟುಂಬ ಯೋಜನೆಯ ಗಾದೆಗಳು ಮತ್ತು ಉತ್ತರ

ಏನೇ ಬೋರಿ ತಾರಾಟ ಅಂದರೆ ಶಾನುಭೋಗರ ಮನೆಯಲ್ಲಿ ಕುಟುಂಬಯೋಜನೆ. ಇಂದು ನಮ್ಮನೆಗೆ ಬರ್ತಾರೆ ಅದಕ್ಕೇ! ಅಂದಳಂತೆ.

* * * *

ತಮ್ಮಾ! ತಂಟೆಗೆ ಸಿಗಬೇಡ
ಅಂದರೆ, ಅವ, ಅಣ್ಣಾ ಸಿಕ್ಕಿದ್ದು ಬಿಡುಲ್ಲ ಅಂದನಂತೆ.

* * * *

ಹೊತ್ತಲ್ಲದ ಹೊತ್ತಿನಲ್ಲಿ ತೊತ್ತಿ ವ್ಯೈ ಇಳಿದರೆ
ಕತ್ತಲಲ್ಲೇ ದೇವರಿಗೆ ಕೈಮುಗಿದನಂತೆ, ಸಾಹುಕಾರನ ಮಗ.

* * * *

ನಗದೀ ಗುಮಾಸ್ತ ನೀರಿಗೆಳೆದರೆ
ಭಗಿನೀ ಅಧ್ಯಕ್ಷಿಣಿ ಏರಿಗೊಯ್ದಳಂತೆ.

* * * *

ಹಿತ್ತಲಗಿಡದಲ್ಲಿ ಮದ್ದಿದ್ದರೂ ಬೇಡ
ಮನೆ ಹೆಂಡತೀಗೆ ಮಕ್ಕಳೂ ಬೇಡ

* * * *

ಬಡ ಮುತ್ತೈದೆಗೆ ಇಜ್ಜೋಡಿ ಮಕ್ಕಳಂತೆ
ಬಂಜೆ ಶ್ರೀಮಂತೆಗೆ ಮೂರಾರು ವ್ಯರ್ಥ ಆಪರೇಷನಂತೆ.

* * * *

ಹಡೆಯಲಾರದ ಹಣವಂತೆ ಗಂಡನನ್ನು ದೂಷಿಸಿದಳಂತೆ.

* * * *

ಕುಂಟನಿಗೆ ಎಂಟು ಮಕ್ಕಳಾದರೆ ಕುರುಡನಿಗೆ ನೂರು ಮಕ್ಕಳಂತೆ
—ಬೇಕಾದರೆ ವ್ಯಾಸನನ್ನು ಕೇಳಿ!

* * * *

ಅಂಬಲಿ ಕುಡಿಯೋನ್ನಿಗೆ ಮಕ್ಕಳ ಸಾಕುವ ದಾದಿ ಬೇಕಂತೆ.

* * * *

ಹಾಳಾಗಲೊಲ್ಲದೆ ಬಾಳಬಯಸಿದವ ಮೂರೇ ಮಕ್ಕಳ ತಂದೆಯಂತೆ.

* * * *

ಓದಿಲ್ಲ ಬರಹವಿಲ್ಲ—ಅಳಿಯ ಬಹಾಳ ಶಹಣೆ
—ಯಾಕ ಅಂತೀರಿ ಇಬ್ಬರೇ ಮಕ್ಕಳು ೩೦ ವರ್ಷದಾಗ ಅಂತ ಅತ್ತೆ ಜಂಭ ಕೊಚ್ಚಿದಳಂತೆ.

ಗುಬ್ಬಚ್ಚಿಯ ಪುರಾಣಿ ಕಥೆಗಳು

೧

ಚೆಂದೂರಿನಲ್ಲಿ ಒಂದು ಗುಬ್ಬಚ್ಚಿ ಗೂಡುಕಟ್ಟಿಕೊಂಡು ಸಂಸಾರಮಾಡುತ್ತಿತ್ತಂತೆ. ಒಂದು ದಿವಸ ಒಂದು ಗುಬ್ಬಚ್ಚ ಬಂದು ಬಾಗಿಲು ತಟ್ಟಿತಂತೆ. ಆಗ ಗುಬ್ಬಚ್ಚಿ ಹೇಳಿತಂತೆ

—"ನನ್ನ ಗಂಡನಿಗೆ ಎರೀತಾ ಇದೀನಿ, ಸ್ವಲ್ಪ ತಡೀಪ್ಪಾ" ಅಂತ.

ಸ್ವಲ್ಪ ಹೊತ್ತಾದ ಮೇಲೆ ತಿರುಗಿ ಬಾಗಿಲು ತಟ್ಟಿದಾಗ.

—"ನನ್ನ ಮಕ್ಕಳಿಗೆ ಎರೀತಾ ಇದೀನಿ, ಸ್ವಲ್ಪ ತಡೀರೀ!" ಅಂತ ಹೇಳಿತಂತೆ.

ತಿರುಗಿ ಬಾಗಿಲು ತಟ್ಟಿದಾಗ

—ನನ್ನ ಗಂಡ ಮಕ್ಕಳಿಗೆ ಊಟ ಬಡಿಸ್ತಾ ಇದೀನಿ ಸ್ವಲ್ಪ ಇರೀ" ಎಂತಂತೆ.

ಮರಳಿ ಬಾಗಿಲು ತಟ್ಟಿದ ಶಬ್ದ ಆದಾಗ

—"ಹಾಸಿಗೆ ಹಾಸಿ ಕೊಡ್ತಾ ಇದ್ದೀನಿ, ಸ್ವಲ್ಪ ತಡಿ" ಎಂತಂತೆ.

ತಿರುಗಿ ಬಾಗಿಲು ತಟ್ಟಿದಾಗ

ಗುಬ್ಬಚ್ಚಿ ಸಿಂಗಾರಮಾಡಿಕೊಂಡು ಸದ್ದಿಲ್ಲದೆ ಬಾಗಿಲು ತೆಗೆದು ಮೆಲ್ಲಗೆ ಹೊರ ಹೊರಟಾಗ ಗುಬ್ಬಚ್ಚನಿಗೆ ಹೇಳಿತಂತೆ—"ಎಲ್ಲರೂ ಮನೇಲಿ ಸುಸ್ತಾಗಿ ತಿಂದು ಮಲಗಿದ್ದಾರೆ ಈಗ ಸಿನೀಮಾಗೆ ಹೋಗೋಣ ಬಾ" ಅಂತ.

* * * *

೨

ಸಂತೆಯಿಂದ ಬಟಾಣಿ ಈರುಳ್ಳಿ ಎಲ್ಲವನ್ನೂ ಗುಬ್ಬಚ್ಚಿ ತಂದಿದ್ದನ್ನು ಕಛೇರಿಗೆ ಹೋಗುವಾಗ ಗಂಡು ಗುಬ್ಬಚ್ಚ ನೋಡಿದನಂತೆ. ರಾತ್ರಿ ಊಟ ಬಲು ಮೋಜು ಎಂದುಕೊಂಡು ಮಧ್ಯಾಹ್ನ ತಿಂಡಿಯನ್ನೂ ತಿನ್ನಲಿಲ್ಲವಂತೆ.

ರಾತ್ರಿ ಊಟಕ್ಕೆ ಕುಳಿತಾಗ ಅನ್ನ, ಗೊಡ್ಡು ಸಾರು, ನೀರುಮಜ್ಜಿಗೇನೇ ಬಡಿಸಲ್ಪಟ್ಟಿತಂತೆ. "ಏನೇ ಇದು! ಬಟಾಣಿ ಈರುಳ್ಳಿ ಏನಾಯ್ತೇ" ಎಂದನಂತೆ.

ಬಟಾಣಿ ಉಸುಲಿ ಈರುಳ್ಳಿ ಪಕೋಡ ಮಾಡಲು ನಾಲ್ಕು ಗಂಟೆಗೆ ತೊಡಗಿದೆ. ನಾಲ್ಕೂವರೆ ಗಂಟೆಗೆ ಏನೆಲ್ಲಾ ಘಮಘಮ ಹೊರಟಿತು ನಮ್ಮ ಅಡಿಗೆ ಮನೆಯಿಂದ. ಅಂತೀರೀ ಅಂದ್ರೆ! ಐದು ಗಂಟೆ ಹೊತ್ತಿಗೆ ನಿಮ್ಮ ಜತೆಗೆ ಇಸ್ಪೀಟಿಗೆ ಬರ್ತಾನಲ್ಲಾ ಆ ಬಾಲು ಬಂದು ಬಾಗಿಲು ತಟ್ಟಿದ. ಏನಪ್ಪಾ ಅಂತ ಬಾಗಿಲು ತೆಗೆದರೆ, ವಾಸನೆ ಹಿಡಿದು ಬಂದೆ ಅಂದ. ಮೊದಲ ತಟ್ಟೆ ಅವನು ಮುಗಿಸಿದ. ನಂತರ ನಿಮ್ಮ ಗಾಯನ ಸಮಾಜದ ಸ್ನೇಹಿತರು ಶ್ಯಾಮರಾಯರು ಬಂದರು. ಎರಡನೆ ತಟ್ಟೆ ಮುಗಿಸಿದರು. ಹೀಗೇನೇ ಮಾಡಿದ ಮಿಕ್ಕ ಆರು ತಟ್ಟೆಗಳನ್ನೂ ನಿಮ್ಮ ಸ್ನೇಹಿತರುಗಳು ಬಂದು ತಿಂದು ಮುಗಿಸಿದರು.

ಅದಕ್ಕೇ ಅಂದ್ರೆ ಬರೀ ಗೊಡ್ಡುಸಾರು ಮಾಡಿಟ್ಟು, ಮಧ್ಯಾಹ್ನದ ಅನ್ನ ಸಾಕಾಗಿದ್ದರಿಂದ, ಬೇರೆ ಅನ್ನ ಮಾಡಲಿಲ್ಲ ಅಂದ್ರೆ ಅಂತ ಕೊಂಕುತ್ತಾ ಬೆಡಗುತ್ತಾ ಹೇಳಿದಾಗ, ಪರವಾಗಿಲ್ಲ ಕಣೆ ಅಂದನಂತೆ ಗಂಡ. ಉಂಡು ಮುಗಿಸಿ.

—ಬಚ್ಚು.

ಬೇಸಿಗೆಗೆಂದು ಮದ್ರಾಸ್ ಮೈಲಾಪೂರಿನ ಶ್ರೀಮಂತರು ಈ ಸಾರಿ ಬೆಂಗಳೂರಿಗೆ ಬಂದು ಇದ್ದಮೇಲೆ "ನಮ್ಮೂರಿನ ಕಜಗಂ ಕೂಡ ಇದಕ್ಕಿಂತ ತಂಪಾಗಿದೆ" ಎಂದು ಹೇಳಿದರೆಂಬುದು ಖಚಿತವಲ್ಲವಂತೆ?

* * * *

ರಾಜಕಾರಣಿಗಳೊಬ್ಬರು ಪ್ರಜಾಸಭೆಯಲ್ಲಿ ಉಗ್ರಭಾಷಣ ಮಾಡುವ ಮೊದಲು ಒಂದು ಲೋಟ ತಣ್ಣೀರು ಕುಡಿಯುತ್ತಾರಂತೆ.

—ನೀರು ಕುಡಿಯುವ ಅಭ್ಯಾಸ ಮರೆತವರಿಗೆ ತಣ್ಣೀರು ಕುಡಿಸಿದರೆ ಬಲು ಜೋರಾಗಿ ಕೆರಳುವುದು ಸ್ವಾಭಾವಿಕವಲ್ಲವೆ!

* * * *

ಕೇರಳದಲ್ಲಿ ವಿದ್ಯಾಭ್ಯಾಸ ಕಾನೂನು ಪ್ರಯುಕ್ತ, ಶಾಲೆಗಳನ್ನೇ ಮುಚ್ಚುತ್ತಾರಂತೆ.

—ಕೈಲಾಸಂ ಕೇರಳ ಯಾತ್ರೆಮಾಡಿ ಬಂದಾಗ ಹೇಳಲಿಲ್ಲವೇ— ಮಕ್ಕಳ ಸ್ಕೂಲ್ ಮನೇಲಲ್ವೇ! ಅಂತ!

ಒಂದು ಅಂತರಂಗ ಪತ್ರ

(ಕಾ. ಕಿಟ್ಟಿಯು ಟಿಬೆಟ್)

ಶ್ರೀ ಶ್ರೀ ಮೋತ್ಸೆಟಂಗ ಕರಕಮಲ ಸಂಜಾತ, ಉಭಯ ದರ್ಶನ (ಬೌದ್ಧ-ಮಾರ್ಕ್ಸ್)ದಿವಾಕರ, ಬೌದ್ಧಗುರು ಗರಿಷ್ಠ, (ಹಾಲೀ) ಲ್ಹಾಸಾಧಿಪತಿ ಶ್ರೀ ಶ್ರೀ ಶ್ರೀ ಪಂಚೆನ್ ಲಾಮಾರವರ ಪಾದಪದ್ಮಂಗಳಲ್ಲಿ, ನರಮೇಷ, ವಿಧಿಹತಕ ಕಾಮ್ರೇಡ್ ಕೋಣನೂರು ಕಿಟ್ಟಿಯು ವಿನಮ್ರ ವಿಜ್ಞಾಪನೆಗಳು.

ತಾವು ಇನ್ನೂ ಪೀಕಿಂಗಿನಲ್ಲೇ (ನಮ್ಮಪ್ಪ ಇನ್ನೂ ಬೆಂಗಳೂರಿನಲ್ಲೇ ಇದ್ದ ಹಾಗೆ)ಇರುವಿರೋ, ಲ್ಹಾಸಾಕ್ಕೆ ಹಿಂತಿರುಗಿ ಬಂದಿರೋ ತಿಳಿಯದಾಗಿದೆ ಮಹಾಸ್ವಾಮಿ. ಆದರೂ ಕೂಡ ಇಂಡಿಯಾಕ್ಕೆ ಓಡಿಬರಲಾಗದೆ ಟಿಬೆಟ್ಟಿನಲ್ಲೇ ಉಳಿದುಕೊಂಡ ಖಂಪಾನಂತಹ ಹಿಂಸೆಯನ್ನು ನಾನು ಅನುಭವಿಸುತ್ತಿವುದರಿಂದ, ಜರೂರಾಗಿ ಈ ಕಾಗದ ಬರೆಯಬೇಕಾಯಿತು.

ನನ್ನ ಸಮಸ್ಯೆಯನ್ನು ತಮ್ಮ ಅವಗಾಹನೆಗೇ ತರಲು ಕೆಲವು ಕಾರಣಗಳಿವೆ. ಒಂದನೆಯ ಕಾರಣ: ನನ್ನ ಸಮಸ್ಯೆಯೂ, ಟಿಬೆಟ್ಟಿನ ಜನಸಾಮಾನ್ಯರ ಸಮಸ್ಯೆಯೂ ಒಂದೇ. ತಾವು ಟಿಬೆಟ್ಟಿನ ಜನರ ಕಲ್ಯಾಣಕ್ಕಾಗಿ ಸತತ ಶ್ರಮಿಸುತ್ತಿರುವಿರಾದ್ದರಿಂದ, ನನ್ನ ಕಲ್ಯಾಣಸಾಧನೆಗೆ ಉಪಾಯವೊಂದನ್ನು ಸೂಚಿಸುವಿರೆಂಬ ಆಶೆ ನನಗಿದೆ. ಎರಡನೆಯ ಕಾರಣ: ನಿಮಗೆ ಈಗ ನೆನಪಿಲ್ಲದಿದ್ದರೂ ಸಹ, ನನಗೂ ತಮಗೂ ಬಲು ಹತ್ತಿರದ ಸಂಬಂಧವಿದೆ. ಹೋದ ಜನ್ಮದಲ್ಲಿ ನಾನು ಯಾಕ್ ಮೃಗವಾಗಿದ್ದಾಗ, ನೀವೇ ನನ್ನನ್ನು ಸಾಕಿಕೊಂಡಿದ್ದವರು. ಅದರ ಹಿಂದಿನ ಜನ್ಮದಲ್ಲಿ ಫೇಂಡಾಮೃಗವಾಗಿದ್ದಾಗ, ನೀವು ಬೇಟೆಯಾಡಲು ಬಂದು ನನ್ನನ್ನು ಕೊಲ್ಲಬಹುದಾಗಿದ್ದಾಗ ಪರಮ ಕರುಣಾಶಾಲಿಗಳಾದ ತಾವು ಹಾಗೆ ಮಾಡದೆ ನನ್ನನ್ನು ಉಳಿಸಿದಿರಿ. ಅದನ್ನೂ ನಾನಿನ್ನೂ ಮರೆತಿಲ್ಲ.

ನನ್ನ ಕಲ್ಯಾಣವೆಂದು? ಇದೀಗ ನನ್ನ ಸಮಸ್ಯೆ. ಅಂತಃಕಲಹವಿರುವ ಮನೆ ನಿಲ್ಲದು. ನಾಯಕತ್ವಕ್ಕಾಗಿ ಹೋರಾಟ ಯಾವ ಸರಕಾರದಲ್ಲಿದೆಯೋ ಅದರಿಂದ ಜನಸಾಮಾನ್ಯರ ಕಲ್ಯಾಣ ಸಾಧನೆಯಾಗದು. ನಮ್ಮ ಗೃಹ ಸರ್ಕಾರದಲ್ಲೂ ಹಾಗೇ ಆಗಿ ನನ್ನ ಕಲ್ಯಾಣ ಸಾಧನೆಯಾಗಿಲ್ಲ.

ನಮ್ಮ ಮನೆಯಲ್ಲೂ (ಈ ಹಿಂದೆ ನಿಮ್ಮ ದೇಶದಲ್ಲಿ ಇದ್ದಂತೆ) ಇಬ್ಬರು ಯಜಮಾನರು! ನಮ್ಮಣ್ಣ, ನಮ್ಮಪ್ಪ. ನಮ್ಮಣ್ಣನೇ ನನ್ನನ್ನು ಓದಿಸಿ, ಕೆಲಸ ಕೊಡಿಸಿ, ದುಡಿಯಲು ಹಚ್ಚಿದವನು. ನಮ್ಮಪ್ಪ ಗೃಹ ಸರ್ಕಾರದ ನಾಯಕತ್ವಕ್ಕೆ ಹೋರಾಡಲಾರಂಭಿಸಿದುದು ಇತ್ತೀಚಿಗೆ, ಅವನನ್ನು ಈ ಸ್ಪರ್ಧೆಗೆ ಪ್ರೇರಿಸಿದವಳು ನಮ್ಮ ಸೋದರತ್ತೆ. ಅಂದಹಾಗೆ ನಮ್ಮ ಮನೆಯ ಮೇಲಿನ ಸಾರ್ವಭೌಮಾಧಿಕಾರ ಬೆಂಗಳೂರಿನ ನಮ್ಮ ಸೋದರತ್ತೆಯದೇ! ಅದೇಕೋ? ಹೇಗೋ? ಆ ಭಗವಂತನೇ ಬಲ್ಲ! ಕಾಮ್ರೇಡ್ ಲೆನಿನ್ನನೇ ಬಲ್ಲ!

ಮೈಮುರಿದು ದುಡಿಯುವ, ನನ್ನ ಕಲ್ಯಾಣಮಾಡಲು ಮೊದಲು ಆಸಕ್ತಿ ವಹಿಸಿದವನು, ನಮ್ಮಣ್ಣ. ಅನೇಕ ಹೆಣ್ಣುಗಳನ್ನು ನೋಡಿ, ತಮ್ಮಾ, ನಮ್ಮ ಕಲ್ಯಾಣ ಕಂಡುಂಡವರಲ್ಲೇ, ಕಳ್ಳುಬಳ್ಳಿಯಲ್ಲೇ ಆಗಬೇಕಾದುದು ವಿಹಿತ. ಮನೆಯಲ್ಲೇ ಅಕ್ಕನ ಮಗಳಿರುವಾಗ ಬೇರೆ ಕಡೆಯ ಹೆಣ್ಣೂ ಬೇಡ. ಆ ಭಂಗವೂ ಬೇಡ, ಎಂದ.

ಆಗ ಇಷ್ಟು ದಿನವೂ ಇಲ್ಲದ ಸೋದರತ್ತೆ ಗೃಹ ಸರ್ಕಾರದ ಮೇಲಿನ ಸಾರ್ವಭೌಮತ್ವವನ್ನು ಮೆರೆಸಿದಳು. ನಮ್ಮಪ್ಪನನ್ನು, ಅಣ್ಣನ ವಿರುದ್ಧ ಎತ್ತಿಕಟ್ಟಿದಳು. "ಅಣ್ಣ, ಮನೆಯ ಹೆಣ್ಣು ನಿಜ. ಸೋದರಿಕೆಯಾದರೂ ಹುಡುಗಿಗೆ ಲಗ್ನಾತ್, ಚಂದ್ರಾತ್, ಶುಕ್ರಾತ್, ಯುರೇನಾಸಾತ್, ಮೆಷ್ಟ್ಯಾತ್ ಕುಜದೋಷವಿದೆ. ವರದಕ್ಷಿಣೆಯೂ ಇಲ್ಲ. ಹುಡುಗಿ ಬೌದ್ಧ ಧರ್ಮದಷ್ಟು ಹಳೇ ಸಂಪ್ರದಾಯದಲ್ಲಿ ಬೆಳೆದ ಬಿಚ್ಚೋಲೆ ಗೌರಮ್ಮ. ಆದುದರಿಂದ ಅವಳು ಬೇಡ. ಕಮ್ಯುನಿಷ್ಟ್ ತತ್ವದಂತೆ, ಸಿನಿಮಾ ನಟಿಯಂತೆ ಆಕರ್ಷಕಳಾದ ಹೆಣ್ಣನ್ನು ಹತ್ತು ಸಾವಿರ ವರದಕ್ಷಿಣೆಯೊಂದಿಗೆ ಕೊಡಿಸುತ್ತೇನೆ" ಎಂದು ನಮ್ಮಪ್ಪನಿಗೆ ಬೋಧಿಸಿದಳು.

ನಮ್ಮಣ್ಣ ವಿರೋಧಿಸಿದ. ಆದರೆ ವಜ್ರಮುಷ್ಟಿಯ ಉಕ್ಕಿನ ಸ್ತ್ರೀ ನಮ್ಮತ್ತೆಯ ಹಾಗೂ ಆಶಾಗ್ರಸ್ತ ಕೈಗೊಂಬೆ ನಮ್ಮಪ್ಪನ ಮುಂದೆ ಅವನಾಟ ನಡೆಯಲಿಲ್ಲ. ಅವನು ಮನೆಯಲ್ಲಿ ತನ್ನ ಸ್ಥಾನ ಉಳಿಸಿಕೊಳ್ಳಲೆಂದು ಇವರೊಡನೆ ಸ್ವಯಮಾಡಳಿತ ಕರಾರು ಮಾಡಿಕೊಂಡು ಸುಮ್ಮನಾದ. ಇದು ಒಂದೂವರೆ ವರ್ಷದ ಹಿಂದಿನ ಸುದ್ದಿ.

ಈಗ ನಾಲ್ಕು ತಿಂಗಳ ಕೆಳಗೆ ಸೋದರತ್ತೆ ನಮ್ಮಪ್ಪನನ್ನು ಬೆಂಗಳೂರಿಗೆ ಕರೆಸಿಕೊಂಡಳು. ಮಯಾ ಪ್ಲಿಸೆಟ್‌ಸ್ಕಯಾಗಿಂತ ಸುಂದರಿಯಾದ ಹೆಣ್ಣು ಇದ್ದಾಳೆ. ಅಪ್ಪ ತುಂಬಾ ಸ್ಥಿತಿವಂತ. ಅವಳೊಡನೆ ಕಿಟ್ಟಿಯ ಕಲ್ಯಾಣ ಏಕಾಗಬಾರದು? ನಮ್ಮಣ್ಣ "ಕಿಟ್ಟೀ ಷಹರಿನ ಹೆಣ್ಣು. ತುಂಬಾ ಚಾಲೂಕು ಬೇಡ" ಎಂದ. ಇದಕ್ಕೇ ನಮ್ಮ ಸೋದರತ್ತೆ ಕಾಯುತ್ತಿದ್ದಳು. ನೀನು ಒಪ್ಪಂದ ಉಲ್ಲಂಘಿಸಿದೆ

ಎಂಬ ಆರೋಪಣೆ ಮಾಡಿದಳು. ನಮ್ಮಪ್ಪ ಅಣ್ಣನ ಮೇಲೆ ರೇಗಿದ. ಅಣ್ಣ ಇದಿರುಬಿದ್ದ. ಆಟ ನಡೆಯಲಿಲ್ಲ. ನಮ್ಮಣ್ಣ ತಲೆತಪ್ಪಿಸಿಕೊಂಡು ಹೋಗಿಯೇ ಬಿಟ್ಟ.

ನನಗೆ ಸಂಕಟವಾಯಿತು. ಆದರೇನು ಮಾಡಲಿ. ಬೆಂಗಳೂರಿಗೆ ಹೋದೆ. ಹೆಣ್ಣು ನೋಡಿದೆ. ಒಪ್ಪಿದೆ. ಹೇಗೋ ಕಲ್ಯಾಣವಾಗುವುದೆಂಬ ಆಶೆ ನನಗಿತ್ತು.

ಆದರೆ ವರದಕ್ಷಿಣೆ ಸಿಗಲಾರದೆಂಬ ಅನುಮಾನ ಸೋದರತ್ತೆಗೆ ಬಂತು. ಆಗವಳು ಆ ಹುಡುಗಿಗೆ ಇರುಳುಗಣ್ಣು, ಅವಳ ದೊಡ್ಡಪ್ಪ ಕುಂಟ, ಅವಳಣ್ಣ ಪ್ರತಿಗಾಮಿ, ಅವಳಪ್ಪ ಬಂಡವಾಳಶಾಹೀ ಆದುದರಿಂದ ಆ ಹೆಣ್ಣು ಬೇಡ ಎಂದಳು. ಅವಳ ಕೈಗೊಂಬೆ ನಮ್ಮಪ್ಪನೂ ಅವಳೆಂದುದನ್ನೇ ಚಾಚೂ ತಪ್ಪದೆ ಹೇಳಿದ. ನಾನು ಆ ಹೆಣ್ಣೇ ಬೇಕು ಎಂದೆ.

ಆಗ ಸೋದರತ್ತೆ ನಿನಗಿನ್ನೂ ಇಪ್ಪತ್ತೊಂಬತ್ತು ವಯಸ್ಸು. ಇಷ್ಟುಬೇಗ ಕಲ್ಯಾಣವೇಕೆ? ದುಡಿಯುತ್ತಿರು ಎಂದಳು. ನಮ್ಮಪ್ಪನಿಗೆ ತುಪ್ಪನ್ನ, ಮೊಸರನ್ನ, ಬಿಸಿಬೇಳೆ ಹುಳಿಯನ್ನು ಬಡಿಸಿ (ನಿಮಗೆ ಪೀಕಿಂಗಿನಲ್ಲಿ ಮಾಡಿದಹಾಗೆ) ಉಪಚಾರ ಮಾಡುತ್ತಾ ಬೆಂಗಳೂರಿನಲ್ಲೇ ಇಟ್ಟುಕೊಂಡು ಬಿಟ್ಟಳು. ನಮ್ಮಪ್ಪ ನನ್ನ ಕಲ್ಯಾಣವನ್ನೇ ಮರೆತ. ಇನ್ನೂ ಸಣ್ಣ ಹುಡುಗ. ಇಷ್ಟು ಬೇಗ ಮದುವೆ ಬೇಡ ಎಂದುಬಿಟ್ಟ.

ಆಯಿತಲ್ಲ ನನ್ನ ಕಲ್ಯಾಣ! ನಾನು ನನ್ನ ಸ್ನೇಹಿತರ ಮರೆಹೊಕ್ಕೆ. ಏನಾದರೂ ಮಾಡಿ ಎಂದು ಬೇಡಿಕೊಂಡೆ. ಆದರೆ ನನ್ನ ಸ್ನೇಹಿತರೆಲ್ಲಾ (ನಮ್ಮ ಪ್ರಧಾನಿ ನೆಹರೂರಂತೆ) ತಟಸ್ಥರಾಗಿಬಿಟ್ಟಿದ್ದಾರೆ. ಅವರು ಏನು ಮಾಡಲು ಸಾಧ್ಯ? ನಮ್ಮ ಗೃಹಕೃತ್ಯದಲ್ಲಿ ಅವರು ಹಸ್ತಕ್ಷೇಪ ಮಾಡಲು ಸಾಧ್ಯವೇ? ಅವರೂ ಹೇಳುವಷ್ಟು ಹೇಳಿದರು ; ಆದರೆ ಅದೆಲ್ಲ ವ್ಯರ್ಥ. ನನ್ನ ಈ ಕಲ್ಯಾಣ ಸಮಸ್ಯೆಯ ಹಿಂದೆ ಇರುವ (ಕೃಷ್ಟೇವರಷ್ಟು) ನಿಗೂಢವ್ಯಕ್ತಿ ನಮ್ಮಮ್ಮ ಎಂಬ ಸಂಶಯವೂ ನನಗಿದೆ. ಅವಳೂ ಅವಳ ನಾದಿನಿ (ನನ್ನ ಸೋದರತ್ತೆ) ಯೂ ಅಷ್ಟು ಹಿತವಾಗಿರುವರೇಕೆ? ಸೇರಬಾರದವರು ಸೇರಿದರೆ ಆಗಬಾರದ್ದು ಆಗುವುದಿಲ್ಲವೆ ?

ಹೀಗಾಗಿ ನನ್ನ ಸಮಸ್ಯೆ ಟಿಬೆಟ್ ಸಮಸ್ಯೆಯಷ್ಟೇ ಜಟಿಲವಾಗಿದೆ. ದುರ್ಗಮವಾಗಿದೆ. ಹುತ್ತದಲ್ಲಿ ಹುತ್ತ ಎಂದು ಅದನ್ನು ವರ್ಣಿಸಬಹುದು. ನನ್ನ ಮೂವತ್ತನೆಯ ವಸಂತವೂ ವ್ಯರ್ಥ !

ಹಾಗೆಯೇ ಯೋಚಿಸಿದರೆ ನಾನು ಯಾಕಾದರೂ ಯಾಕ್ ಆಗಿ ಹುಟ್ಟದೆ ಮನುಷ್ಯನಾದೆನೋ ಎನ್ನಿಸುತ್ತದೆ.

ತಾವು ಪೀಕಿಂಗಿನಲ್ಲಿ ಸುಖವಾಗಿರಬಹುದು. ತಮಗೆ ಅನೇಕ ಸತ್ಕಾರ ಸಮಾರಂಭಗಳೇರ್ಪಟ್ಟಿರಬಹುದು, ಆದರೂ (ನಮ್ಮಪ್ಪನಂತೆ ನನ್ನ ಮಾತನ್ನು ಕಿವುಡುಗೇಳದೆ) ನನ್ನ ಮೊರೆ ಲಾಲಿಸಿ ನನ್ನ ಸಮಸ್ಯೆಗೆ ಪರಿಹಾರವನ್ನು ಸೂಚಿಸುವಿರೆಂದು ನಂಬಿದ್ದೇನೆ ತಾವು ಹಾಗೆ ಮಾಡಿದರೆ ನಾನು ನನ್ನ ಮುಂದಿನ ಜನ್ಮದಲ್ಲಿ ಮತ್ತೆ ಯಾಕ್ ಆಗಿ ಹಾಲು, ತುಪ್ಪಟ, ಮಾಂಸಗಳನ್ನು ನೀಡಿ ತಮ್ಮ ಋಣ ತೀರಿಸುತ್ತೇನೆ.

ಇಂತು ತಮ್ಮ ಪಾದಧೂಳಿ,

ಕಾ. ಕೊಣನೂರು ಕಿಟ್ಟಿ.

ಹಿಂದಿನಿಂದ :

1. ಕಲ್ಯಾಣದ ಆಶೆಯೇ ನನ್ನ ದುಃಖಕ್ಕೆ ಮೂಲ. ಆದುದರಿಂದ ಅದನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಸೇರಿ ಸಾರನಾಥ ಸ್ತೂಪವನ್ನೂ, ಬುದ್ಧಗಯೆಯನ್ನೂ ರಕ್ಷಿಸಿ ಸರಿಯಾಗಿ ನೋಡಿಕೊಳ್ಳುತ್ತೇನೆ. ಆದರೆ ಪೀಕಿಂಗಿನ ಟಿಬೆಟ್ ದೇವಾಲಯದ ಹುಚ್ಚರನ್ನು ತಾವು ಓಡಿಸಬೇಕೆಂದು ಪ್ರಾರ್ಥನೆ.

2. ಭಾರತಕ್ಕೆ ಬಂದಾಗ ತಮಗೆ ಉಪಚಾರ ಸರಿಯಾಗಲಿಲ್ಲವೆಂದು ತಾವು ಹೇಳಿದ್ದು ಓದಿ ದುಃಖವಾಯಿತು. ಮತ್ತೊಮ್ಮೆ ಬಂದಾಗ ನನಗೆ ತಿಳಿಸಿರಿ. ನಮ್ಮ ಸೋದರತ್ತೆಯ ಮನೆಗೆ ಕರೆದುಕೊಂಡು ಹೋಗಿ ತುಪ್ಪನ್ನ, ಮೊಸರನ್ನ ಹಾಕಿಸುತ್ತೇನೆ. ಅವಳು ಮಾಡುವ ಬಿಸಿಬೇಳೆ ಹುಳಿಯನ್ನ ಎಷ್ಟು ರುಚಿ ಅಂತೀರಿ.

ಇಂತು ತಮ್ಮ ದಾಸ,

ಕಾ. K. ಕಿಟ್ಟಿ.

ನಮಗೆ ಬಂದ ಪತ್ರಗಳು

ಜೇಬುಗಳ್ಳ ಜಿಮ್ಮಿಯಿಂದ

ಕೊರವಂಜಿ ಸಂಪಾದಕರಿಗೆ,

ನಮಸ್ತೆ. ನಮ್ಮ ಕಸುಬಿಗೆ ಸೇರಬಹುದಾದ ನೀವಾದರೂ ನನ್ನ ಕಾಗದ ವನ್ನು ಪ್ರಕಟಿಸುತ್ತೀರೆಂದು ನಂಬಿ ಈ ಕಾಗದವನ್ನು ಬರೆಯುತ್ತಿದ್ದೇನೆ.

ಎಲ್ಲ ಪತ್ರಿಕೆಗಳಲ್ಲೂ ನಮ್ಮನ್ನು ಬೈದು, ಅಂದು, ಶಪಿಸಿ, ಪತ್ರಗಳನ್ನು ಬರೆಯುತ್ತಾರೆ. ಇಂಥಿಂತ ಅಸಹಾಯಕ ಪಿನ್ಷಿನ್‌ದಾರರ ಜೇಬಿಂದ, ಪಿನ್ಷಿನ್ ಹಣವನ್ನು ಹೊಡೆದೆವು. ಹಳ್ಳಿ ರೈತರ ಕಿಸೆಯಿಂದ ಸಂತೇಲಿ ಸಂಪಾದಿಸಿದ ಹಣ ವನ್ನು ಗಿಟ್ಟಿಸಿದೆವು. ಅರಿಯದ ವಿದ್ಯಾರ್ಥಿಗಳ ಜೇಬನ್ನು ಖಾಲಿಮಾಡಿದೆವು ಹೀಗೆಲ್ಲಾ ಜನತೆಯೇ ನಮ್ಮನ್ನು ದ್ವೇಷಿಸುವಂತೆ ಬರೆಯುತ್ತಾರೆ.

ಆದರೆ ನಮ್ಮ ಕಸುಬಿನಲ್ಲಿ ಇರುವ ಅಪಾಯಗಳನ್ನು ಗಮನಿಸಿದರೆ ನಮ್ಮ ಸಂಪಾದನೆ ಅಲ್ಪ. ಇದಕ್ಕಿಂತ ಲಾಯರಾಗೋದೇ ಕ್ಷೇಮ, ಡಾಕ್ಟರಾಗೋದೇ ಸುರಕ್ಷಿತ, ರಾಜಕೀಯಕ್ಕೆ ಮೆಟ್ಟೋದೇ ಬಲು ಹಿತ, ಅಲ್ಲೆಲ್ಲಾ ನಮ್ಮ ಕಸುಬನ್ನೇ ಅವಲಂಬಿಸಿದರೂ, ಕಾನೂನಿನ ರಕ್ಷಾ ಕವಚದಿಂದ ಬಾಳಿಬದುಕಬಹುದು. ಸಿಕ್ಕಿ ಹಾಕಿಕೊಂಡರೂ ತಪ್ಪಿಸಿಕೊಳ್ಳಬಹುದು. ನಾವು ಸಿಕ್ಕಿಹಾಕಿಕೊಂಡರೆ, ನಾವು ಅಂತ ಯಾರ ಮೇಲೆ ಅನುಮಾನಬಂದರೂ ಸುತ್ತಲೂ ಇರುವವರೆಲ್ಲ ತದುಕಿ ಒದ್ದು, ಹಣ್ಣುಗಾಯಿ ನೀರುಗಾಯಿ ಮಾಡುತ್ತಾರೆ. ನಮ್ಮನ್ನು ಯಾರೂ ವಹಿಸಿಕೊಳ್ಳೋ ದಿಲ್ಲ. ಹೋದ ಸಾರಿ ನಾನು ಒದಸಿಕೊಂಡಾಗ ಮೂರುವಾರ ಆಸ್ಪತ್ರೇಲಿದ್ದು ಆರುವಾರ ಕೂತುಕೊಳ್ಳಲಾರದೆ ನಿಂತೇ ಜೀವಿಸಿದೆ.

ಆ ಕಾರಣದಿಂದಲೇ ಈ ಪತ್ರ ಬರೆಯುತ್ತಿದ್ದೇನೆ. ನಮ್ಮ ಕಸುಬಿನಲ್ಲಿರುವ ಅಪಾಯಗಳನ್ನು ತಿಳಿಸುವುದಕ್ಕಾಗಿ.

ನಮ್ಮ ಸಂಘದ ೭ನೇ ನಂಬರ ಸದಸ್ಯ ಬಸ್ ಸ್ಟ್ಯಾಂಡಿನಲ್ಲಿ ಖದ್ದರ್ ಜುಬ್ಬ ಹಾಕಿದ್ದ ಹಳ್ಳಿಬಾಂಧವನ ಜೇಬಿಗೆ ಕೈ ಇಳಬಿಟ್ಟು ಹೊರಗೆ ತೆಗೆದುಕೊಂಡಾಗ ಅವನ ಜೇಬಿಂದ ತಾನು ಏನನ್ನಾದರೂ ಹೊಡೆದಿರೋದಿರಲಿ, ತನ್ನ ಕಸುಬಿನ ಕೈಚಿಜಿನ

ಕಿರುಬೆರಳು ತುದಿಯನ್ನು ಅವನ ಜೇಬಿನಲ್ಲೇ ಬಿಟ್ಟಿದ್ದ. ಕಾರಣ! ಆ ಪಾಪಿ ಜೇಬಿನಲ್ಲಿದುದು ಹರಿತವಾದ ಬ್ಲೇಡೊಂದೇ! ಚಾಲೂಕಿನ ಕಿರುಬೆರಳ ತುದಿ ಹೋದ ಮೇಲೆ ಅವನ ಜೀವನ ಹೇಗೆ ಮಾಡಬೇಕು? ಪಿಟೀಲು ಹೋದಮೇಲೆ ಚೌಡಯ್ಯ, ತಂಬೂರಿ ಕಳೆದುಕೊಂಡ ನಾರದನ ಹಾಗೆ, ನಿಶ್ಶಸ್ತ್ರೀಕರಣವಾಗಿ, ಕುಂಟ ಕುರುಡ ಕಿವುಡ ಎಲ್ಲಾ ಆಗಿಬಿಟ್ಟ, ಆಜೀವ ಪರ್ಯಂತ.

ನಮ್ಮ ಸಂಘದ ಮೂರನೆ ನಂಬರ ಸದಸ್ಯ ಲೋಕಸಭೆಯ ಅಧಿವೇಶನದ ಚಹಾ ಕೂಟದಲ್ಲಿ ಮಾನ್ಯರೊಬ್ಬರ ಜೇಬಿಗೆ ಕತ್ತರಿ ಹಾಕಿದಾಗ ಕೆಳಗೇನುಬಿತ್ತು ಗೊತ್ತೇ? ಒಂದು ತುಂಬಿದ ಶೀಷೆ! ಅದು ಬಿದ್ದು ಒಡೆದುಹೋಯಿತು. ದುರ್ನಾಥ ತುಂಬಿಕೊಂಡಿತು ಮೈದಾನದಲ್ಲೆಲ್ಲಾ. ಜೇಬು ಹರಿಸಿಕೊಂಡ ಖದ್ದರ್ ಸದಸ್ಯ ಹತ್ತಿರಿದ್ದ ನನ್ನನ್ನು ಹಿಡಿದುಕೊಂಡ. ಪೋಲೀಸರು ಬಂದರು. ಈ ಶೀಷೆ ಇವನ ಜೇಬಿಂದಲೇ ಬಿತ್ತು ಅವಸರದಲ್ಲಿ ಓಡಿಹೋಗುತ್ತಿದ್ದ. ನನ್ನ ಮಿಲಾಖತ್ತು ಮಾಡಿದಾಗ ಬಿದ್ದುಹೋಯ್ತು ಎಂದು ಸಾಕ್ಷಿ ಹೇಳಿದ. ಮೂರನೇ ನಂಬರ ಸದಸ್ಯ ತಾನು ಜೇಬುಗಳ್ಳ ಎಂದು ಹೇಗೆ ಹೇಳಿಕೊಳ್ಳೋದು? ಎಲ್ಲರ ಕೈಲೂ ಒದೆಸಿ ಕೊಂಡು, ಪೋಲೀಸರ ಕೈಲಿ ಸಿಕ್ಕಿದಾಗಲೇ ಅವ ಬದುಕಿದ್ದು. ಅವರು ಕೇಳಿದರು ನಿನಗೆ ಎಲ್ಲಿ ಎಷ್ಟಕ್ಕೆ ಸಿಕ್ಕಿತೋ ಹೇಳು. ನೀನೂ ಬದುಕುತ್ತಿ, ನಾವೂ ಬದುಕು ತ್ತೇವೆ, ಬಾಳುತ್ತೇವೆ ಎಂದು ಹೇಳಿದರು. ಇವ ಹೇಗೆ ಹೇಳಾನು? ಗೊತ್ತಿದ್ದರೆ ಅಲ್ಲವೇ ಹೇಳೋದು! ಏನೋ ಸುಳ್ಳುಹೇಳಿ ತಲೆ ತಪ್ಪಿಸಿಕೊಂಡು ಈಗ ಟಿಬೆಟ್ಟಿಗೆ ಹೋಗಿಬಿಟ್ಟ.

ನಾಲ್ಕನೆ ನಂಬರ ಸದಸ್ಯ ಲಾಯರೊಬ್ಬರ ಕಿಸೆಗೆ ಕೋರ್ಟಿನಲ್ಲಿ ಬ್ಲೇಡ್ ಹಾಕಿದಾಗ ಕೆಳಗೆ ಬಿದ್ದುದು ಒಂದು ಲಕೋಟೆ. ಇರಬಹುದು ಇದರಲ್ಲಿ ಕಕ್ಷಿಗಾರನ ಹಸಿರು ನೋಟು ಅಂತ ಅವ ಬೇಗ ಹೊರಗೆ ಲಕ್ಕೋಟೆ ಮುಚ್ಚಿ ತೆಗೆದುಕೊಂಡು ಹೋಗಿ, ಕೋರ್ಟು ಹೊರಗಿನ ಆಲದ ಮರದ ಕೆಳಗೆ ತೆಗೆದು ನೋಡಿದರೆ, ತನ್ನ ಹೆಂಡತಿ ಲಾಯರಿಗೆ ಬರೆದ ಪ್ರಣಯಪತ್ರ ಇತ್ತು ಅದರಲ್ಲಿ. ಅವಳಿಗಾಗಿ ಎಂ. ಎ. ಪ್ಯಾಸಾದ ಇವ ಈ ಕಸುಬನ್ನು ಹಿಡಿದಿದ್ದೂ ಈ ಫಲ ಬಂತೆಂಬ ದುಃಖದಿಂದ ಕೈಲಿದ್ದ ಬ್ಲೇಡಿಂದ, ತನ್ನ ಕತ್ತನ್ನೇ ಪೂರ್ಣ ಕತ್ತರಿಸಿಕೊಂಡು ನಿರ್ವಾಣವನ್ನು ಹೊಂದಿದ.

ಈ ರೀತಿ ನಮ್ಮ ಜೇಬುಗಳ್ಳರ ಸಂಘದ ಸದಸ್ಯರ ಬಾಳು ಬಲು ಅಪಾಯಕರ ವಾದ್ದು. ಯಾರೂ ನಮ್ಮಲ್ಲಿ ಅನುತಾಪ ತೋರಿಸುಲ್ಲ. ತಾವಾದರೂ ಈ ಪತ್ರ ಪ್ರಕಟಿಸಿ, ಸಮತಾ ಸಮಾಜದಲ್ಲಿ ನಮಗೂ ಬಹಿರಂಗವಾಗಿ ಸ್ಥಾನಮಾನಗಳನ್ನು ಕಲ್ಪಿಸಿಕೊಡುವಿರೆಂದು ನಂಬಿದ್ದೇನೆ.

ನಮ್ಮ ಸಂಘದಲ್ಲಿ ಮೊನ್ನೆ ಈ ಠರಾವು ಅನುಮೋದಿಸಲ್ಪಟ್ಟಿತು. ಪತ್ರಿಕಾ ಸಂಪಾದಕರ ಜೇಬಿಗೆ ನಮ್ಮ ಸದಸ್ಯರು ಕೈಹಾಕಬಾರದು, ಅಲುಗು ಆಡಿಸಲೂ ಬಾರದು ಅಂತ. ಈಗಲಾದರೂ ಈ ಪತ್ರ ಪ್ರಕಟಿಸುತ್ತೀರಾ? ಪ್ರಕಟಿಸಿದರೆ, ಐಕ್ಯ ಪಾಪಿ ಸದಸ್ಯರ ಅನುಭವಗಳನ್ನು ವಿವರಿಸುತ್ತೇನೆ.

ನಿಮ್ಮ ಜೇಬು ರಕ್ಷಕ,
ಪ್ರಕಾಶ ನಂ. ೨.

[ನಮ್ಮ ಜೇಬಿನಲ್ಲಿ ಏನು ಇಲ್ಲದೇ ಇದ್ದರೂ, ನಮ್ಮ ಮನೆಯವರಿಗೆ ಸಿಗಬಾರದ್ದು ಇರಬಹುದಾದ ಕಾರಣ ಆ ರಕ್ಷಣೆಯನ್ನು ಹೊತ್ತಕಾರಣ ಅವರ ಪತ್ರವನ್ನು ಪ್ರಕಟಿಸಿದ್ದೇವೆ. ಮುಂದಿನ ಅನುಭವದ ಕಾಗದಗಳಿಗೆ ಸ್ವಾಗತ.—ಸಂ.]

ಹಾದಿಯಲ್ಲಿ ಕೇಳಿಸಿದುದು

“ನೋಡಯ್ಯ— ‘ನಿಮಗೆ ಸೇವೆಸಲ್ಲಿಸಲೆ?’ ಅಂತ ತಾನಾಗಿಯೇ ಕೇಳಿದ ನರ್ಸು ನನ್ನ ಮಾತು ಕೇಳಿ—ಕೆನ್ನೆಗೆ ಫಳೀರ್ ಅಂತ ಬಾರಿಸೋದೆ?”

ವೈದ್ಯರಲ್ಲಿ ವಿಷನಿಮಿಷಗಳು

“ಡಾಕ್ಟ್ರೆ—ನಮ್ಮ ಹುಡುಗರಿಗೆ—ಎಷ್ಟು ವಯಸ್ಸಾದರೂ ಇನ್ನೂ ಕತ್ತಲಿನ ಭಯ ಹೋಗಿಲ್ಲ ಏನಾದರೂ ಮಾಡೋಕಾಗುತ್ಯೆ?”

ಮಕ್ಕಳ ತಾಯೀನ ರಾತ್ರೀಹೊತ್ತು ಅವುಗಳ ಹತ್ತಿರ ಮಲಗಿಸಿ—ಸರಿಹೋಗುತ್ತೆ.”

—**ಕೇಘ**

ಗುಂಡಿಯನ್ನು ಒತ್ತಿದರೆ!?

ಡಾ|| ರಾಧಾಕೃಷ್ಣನ್‌ರವರು ನವದೆಹಲಿಯ ವಿಜ್ಞಾನ ಮಂದಿರದಲ್ಲಿ ಒಂದು ವಿದ್ಯುತ್ ಗುಂಡಿಯನ್ನು ಕೆಲವು ದಿವಸಗಳ ಹಿಂದೆ ಒತ್ತಿದಾಗ ದೆಹಲಿಗೆ ಆರು ನೂರು ಮೈಲಿ ದೂರದಲ್ಲಿರುವ ವಿಶಾಖ ಪಟ್ಟಣದಲ್ಲಿ "ಜಯಲಕ್ಷ್ಮಿ" ಅರಬ್ಬಿ ಸಮುದ್ರಕ್ಕೆ ಇಳಿದು ಮಂದಹಾಸ ಬೀರುತ್ತಾ ತೇಲಿಹೋದ ಸಮಾಚಾರ ನಿಮಗೆ ಗೊತ್ತು ಅಲ್ಲವೇ?—ಅವತ್ತೆ ಆ ಗಳಿಗೆಯಲ್ಲೇ ರಾಜೀವಪುರದ ಹಸುವಿನಗುಡಿಯ ಏಳನೇ ಕ್ರಾಸಿನಲ್ಲಿ (ಏನಾಯಿತು ಎಂಬುದು ಯಾವ ಪೇಪರಿನಲ್ಲೂ ಬಂದಿಲ್ಲ. ಈವಾಗ ಬರುತ್ತಿದೆ! ಓದಿ.) ಆರೂವರೆ ಅಡಿ ಉದ್ದದ ಶೀಕೆ ಪಕ್ಕದ ಮನೆ ಜಯಲಕ್ಷ್ಮಿಯನ್ನು ಹಿಂಬಾಗಿಲಿನಲ್ಲಿ ಸಂಧಿಸಿ, ತನ್ನ ಅಟಾಮಿಕ್ ರಿಯಾಕ್ಟರ್‌ನಂತಹ ಗುಂಡಿಗೆಯಲ್ಲಿ ಅಡಗಿದ್ದ ವಿಶಾಲ ಓಷನ್‌ನಂಥಹ ಪ್ರೇಮವನ್ನು ಹೊರಸೂಸಲು ಪ್ರೇಮದ ಗುಂಡಿಯನ್ನು ಒತ್ತಲು—ಆಕೆ ಶೀಕೆಯ ಕಪಾಲಕ್ಕೆ ಎರಡು ಬಿಗಿದು ಕೇಶಲುಂಚನಕ್ಕೆ ಪ್ರಯತ್ನಿಸಿದಳು! ಲಾಮನನ್ನಾಗಿ ಕೇಶಾಂತರಿಸುವ ತರದೂದಿನಲ್ಲಿದ್ದಳು! ಶೀಕೆ ಚೌ ಎನ್. ಲಾಯ್ ಅಂತ ಕೂಗಿಕೊಳ್ಳುತ್ತಾ ಹಿಂದಿನ ಬೀದಿಯ "ಪ್ರೇಮವಿಲ್ಲ"ದ ಕಾಂಪೌಂಡ್ ಹಾರಿ ಜೀವನ ನಾಟಕ ಆಡಿದ! ಮುಂಭಾಗದಲ್ಲಿ ಕೊಳವೆಯ ದೀಪಗಳು ಸಾಲುಸಾಲಾಗಿತ್ತು. ಅಂದವಾದ ಚಂದದ ಬಾಗಿಲು ಮುಚ್ಚಿತ್ತು. ಅಷ್ಟುಹೊತ್ತಿಗೆ "ಪ್ರೇಮವಿಲ್ಲ"ದ ಎರಡು ಜೂಲು ನಾಯಿಗಳು ಶೀಕೆಯನ್ನು ಅಮರಿಕೊಂಡು ಷಿನ್ ಷಿನಾಕಿ ಬೂ ಬ್ಲೂಟು ಎನ್ನುವಂತೆ ಬೊಗಳಲು ಪ್ರಾರಂಭಿಸಿತು! ಶೀಕೆಯ ಮಾಂಸ ಖಂಡಗಳನ್ನು ನೋಡುತ್ತಾ ಕುಣಿದಾಡಿದವು! ಸೆಂಟ್ರಿ ಫ್ಯೂಗಲ್ ಪಂಪಿನಂತೆ ಬಡಿದುಕೊಳ್ಳುತ್ತಿತ್ತು ಅವನ ಹೃದಯ! ಅವನ ಅಯೋರ್ಟದ ರಕ್ತದ ಒತ್ತಡ ಬಾಗಿಲ ಮೇಲೆ ಎದ್ದು ಕಾಣುತ್ತಿದ್ದ ಬಿಳಿಯ ಗುಂಡಿಯನ್ನು ಬಲವಾಗಿ ಒತ್ತಿತು, ಒಳಗೆ ಗಂಟೆ ಫೈರ್‌ಬ್ರಿಗೇಡಿನವರ ಗಂಟೆಯಂತೆ ಹೊಡಿದುಕೊಂಡರೂ!—ಆಕಾಶವಾಣಿಯವರು ಶಾಳವಾದ್ಯ ಕಛೇರಿ ನಡೆಸುತ್ತಲೇ ಇದ್ದರು! ಬಿಸಲುಮಚ್ಚಿಯ ಮೇಲಿದ್ದ ಪ್ರೇಮವಿಲ್ಲದ ಕುಸುಮ ಅಲ್ಲಿಂದಲೇ ಶೀಕೆಯ ಶೀಗೆಕಾಯಿ ಮುಖವನ್ನು ನೋಡಿ ಸರಕ್ಕನೆ ಇಳಿದು ಟೆಲಿಫೋನಿನ ನಾಲ್ಕು ಗುಂಡಿಗಳನ್ನು ಒಂದಾದಮೇಲೊಂದು ಮಿಂಚಿನ ವೇಗದಲ್ಲಿ ತಿರುಗಿಸಿದಳು!...... ಬಿನ್ನಿಮಿಲ್ಲಿನಲ್ಲಿ ಮ್ಯಾನೇಜರೇ ಗುಂಡಿಯನ್ನು ಒತ್ತಿದನು! ಸೈರನ್ ಕರ್ಕಶವಾಗಿ ಕಾರ್ಮಿಕರನ್ನು ಕರೆಯತೊಡಗಿತು! ಸಿಟಿ ಬಸ್ಸು, ಲಾರಿ, ಕಾರು, ಕಡೆಗೆ ಆಟೋ

ರಿಕ್ಷಾ ಸಾರಥಿಗಳೂ ಕೂಡ ಗುಂಡಿಗಳನ್ನು ಒತ್ತಿ ತಮ್ಮ ತಮ್ಮ ವಾಹನಗಳನ್ನು ಕುರ್ಯ್‌ಗುಟ್ಟಿಸಿದರು! ಪಾದಚಾರಿಗಳೆಲ್ಲಾ ಬೆಲೂನುಗಳಂತೆ ಒದ್ದಾಡಿದರು! ನವೀನ ಆಹಾರ ಸಂಶೋಧನಾಲಯದಲ್ಲಿ ಪ್ರಧಾನ ಆಹಾರ ಶಾಸ್ತ್ರಜ್ಞನೇ ಗುಂಡಿಯನ್ನು ಒತ್ತಿದನು! ನೂರಾರು ಆಹಾರ ಉತ್ಪಾದನಾ ಯಂತ್ರಗಳು ಕೆಲಸವನ್ನು ಮಾಡಲು ಉಪಕ್ರಮಿಸಿದವು! ಆದರೆ ಆಳುಗಳು ದೂರದಲ್ಲಿ ಕೆಲವು ಗುಂಡಿಗಳನ್ನು ತೆಗೆದರು! ದಶಮುಗ್ರಹದ ಟೂರಿಸ್ಟ್ ಸೊರಗಿ ಸೊರಗಿ ತನ್ನ ಕೃಶವಾದ ಕಾಲುಗಳಿಂದ ಯಂತ್ರದ ಯಾವ ಗುಂಡಿಯನ್ನು ಅಮುಕಿತೋ! ಅದೂ ಸ್ವರ್ಗವನ್ನು ಸೇರಿತು!....ಡಾಗ್ ಹ್ಯಾಮರ್‌ಷೀಲ್ಡ್‌ರೂ ಗುಂಡಿಯನ್ನು ಒತ್ತಿದರು! ಅವರು ಕಣ್ಣುಬಿಡುವಷ್ಟರಲ್ಲಿ U. N. O. ಕಟ್ಟಡದ ತುತ್ತತುದಿಗೆ ಏರಿಸಲ್ಪಟ್ಟರು! —ಹಾಲಿವುಡ್‌ನಲ್ಲಿ ಬೆಲಿಂಡಾ ಲೀ ತನ್ನ ಕೊಠಡಿಯಲ್ಲಿ ಒಂದು ಬಿಳಿ ಗುಂಡಿಯನ್ನು ಒತ್ತಿದಳು! ಬಾಗಿಲು ತೆರೆಯಿತು....ಒಂದು ಕಪ್ಪನೆಯ ಗುಂಡಿ ಒತ್ತಿದಳು! ಮುಖ ಕ್ಷೌರಕ್ಕೆ ನಯಾಗರದ ಜಲ ಉಕ್ಕಿ ಬಂತು! ಮತ್ತೆ ಹಸಿರು ಗುಂಡಿ ಒತ್ತಿದಳು— ಬಿಸಿ ಬಿಸಿ ಕಾಫಿ ನಳದಲ್ಲಿ ಸುರಿಯಿತು!....ಇನ್ನೊಂದು ಕೆಂಪು ಗುಂಡಿ ಒತ್ತಿದಳು! ಸೊಗಸಾದ ಕಾಮಪ್ರಚೋದನೆಯ ನಾವಲ್ ಬಂತು! . ಇನ್ನೊಂದು ಕಡೆ ಚಚ್ಚೌಕದ ಗುಂಡಿ ಎಳೆದಳು... ಜೋಡಿ ವರ್ಜೀನಿಯ ಸಿಗರೇಟು ಬಂತು!........

"ಪ್ರೇಮವಿಲ್ಲ"ದ ಬಳಿಗೆ ಪೋಲೀಸ್ ವ್ಯಾನೂ ಬಂತು! ಜೂಲು ನಾಯಿಗಳು ಇಸ್ತ್ರಿ ಪೆಟ್ಟಿಗೆಯಂತೆ ಬಾಯಿ ಬಿಟ್ಟುಕೊಂಡೇ ಇದ್ದವು! ಶೀಕೆಯ ಅಟಾಮಿಕ್ (ಪ್ಲೆಟಾನಿಕ್ ಅಲ್ಲ!) ಲವ್ ಪ್ರಕರಣವನ್ನು ಅರ್ಥ ಮಾಡಿಕೊಂಡ ಚೂಟಿ ಯುವಕ ಇನ್ಸ್‌ಪೆಕ್ಟರು ಶೀಕೆಯ ಹೆಕ್ಕತ್ತುಮೇಲೆ ಎರಡು ಬಾರಿಸಿ "ಕಬ್ಬನ್ ಪಾರ್ಕಿಗೆ ನುಗ್ಗೋ ಕಂತ್ರಿ" ಎಂದು ಆಚೆಗೆ ದಬ್ಬಿದರು!

ಶೀಕೆ ಕಬ್ಬನ್‌ಪಾರ್ಕಿಗೆ ನುಗ್ಗಿದ. ಅಲ್ಲಿ ಕೆನಡಾ ಬ್ಯಾಂಡ್ ಬಳಗದವರ ಭರ್ಜರಿ ಬ್ಯಾಂಡು ನಡೆಯುತ್ತಿತು! ಬ್ಯಾಂಡಿನ ಗುಂಡಿಗಳನ್ನು ಅವರು ಬಿಟ್ಟುಬಿಟ್ಟು ಅಮುಕಿದಾಗ—ಈನ! ಮಾನ! ಡೀಕ ಎಂದು ಹಾಡು ಬರುತ್ತಿತ್ತು. ಆಗ ಶೀಕೆಗೆ ಅನ್ನಿಸಿತು—ಅ ಬ್ಯಾಂಡುಗಳ ವರ್ತುಲಾಕಾರದ ಮಾಯಾ ಗುಹೆಗಳಿಂದ, ಒಂದು ಲೆಮನ್.....ಒಂದು ಸೋಡ,....ಕಡೆಗೆ ಒಂದು ವ್ಹಿಸ್ಕಿ ಬಾಟಲ್ ! ಹೊರ ಬಂದು ಹಾರಿ ತನ್ನ ಕೈಗೆ ಬೀಳಬಾರದೆ ಎಂದು!....ಅದೇ ಹೊತ್ತಿಗೆ ನವೀನ ಕರ್ಣಾಟಕದ ನವತರುಣಿ ಭರತನಾಟ್ಯದ ಭಂಗಿಯಲ್ಲಿ ಎದುರಿಗೇ ನಿಂತಿದ್ದಾಳೆ! ಕೆನಡಾದ ದೇವರ ನಾಮಗಳನ್ನು ಕೇಳಿ ತಣಿಯಲೆಂದು! ಎದ್ದು ಚುಚ್ಚುತ್ತಿದ್ದ ಮಕ್‌ಮಲ್ ಚಪ್ಪಲಿಯ ಅಕ್ಕಿಕಾಳು ಮಳೆಯ ತಲೆಯನ್ನು ಮುಖ್ಯ ಹಸ್ತಮುದ್ರೆಯಿಂದೆ ಸುತ್ತಿಗೆ ಕೆಲಸವನ್ನು ಮಾಡಿಸುತ್ತಿದ್ದಾಳೆ! ಅದಕ್ಕೆ ತಕ್ಕ ಅಂಗದ ಅಭಿನಯ! ಮುಖದಲ್ಲಿ ಭಾವ! ಬಾಯಲ್ಲಿ ರಸ! ಎದುರಿಗೆ ಕಾಮನ ಬಿಲ್ಲಿನಂತೆ ಬಗ್ಗಿರುವ ರಂಗಿನ ಪುಷ್ಕಳಿ

ಶೀಕೆಗೆ ಜಯಲಕ್ಷ್ಮಿಯಂತೇ ಕಂಡಳು. ಯದ್ವಾ ತದ್ವದ ಮಾಯೆ! ಕ್ಯಾಲಿಕ್ಲಾತ್ ವತ್ತಲದಲ್ಲಿ ಹುದಗಿದ್ದ ಮಾಯಾ ಜಿಂಕೆ ಶ್ರೀಮತಿ ಕುಮಾರಿ ಮೆಣಶಿನಕಾಯಿ! ಶೀಕೆ ಬಿದ್ದ ಗುಂಡಿಗೆ! ಕು|| ಮೆಣಶಿನಕಾಯಿಯವರ ಜಡೆಯ ಚೇಳಿನಂತೆ ಕೊಂಡಿಗೆ ಬಿಗಿದಿದ್ದ ನೀಲಿ ಟೇಪನ್ನು ಒತ್ತಿದ! ಉಂಗುಷ್ಟದಲ್ಲಿ ಒತ್ತಿದ! ಜಡೆಯ ಗಂಟು ಬಿಚ್ಚಿ ಸುಮಾರು ಮುಕ್ಕಾಲು ಜಡೆ ಕೆಳಕ್ಕೆ ಉದರಿತು ಶೀಕೆಗೆ ದವಡೆಯ ಎರಡು ಹಲ್ಲೂ ಉದರಿತು !....

ನಿಮ್ಮದು ಭೋಗ್ಯದ ಜಡೆ ಎಂಬುದು ನಮಗೆ ತಿಳಿದಿರಲಿಲ್ಲ ಎಂದ ಶೀಕೆ. ಉಳಿದಿರುವ ಹಲ್ಲುಗಳನ್ನಾದರೂ ಜೋಪಾನವಾಗಿಟ್ಟುಕೋ... ಕತ್ತೆ....! ಎಂದಳು ಚೂರಿಯಂಥ ಮೊನೆಯಾಕೆ, ರಾಯಿಚೂರಿನಾಕೆ! ಅ. ಕ. ವಿ. ಪ್ರೇಪದ ವಸಂತೋತ್ಸವದಂದೇ ಕೋರ್ಟಿಗೆ ಹಾಜರಾಗಬೇಕೆಂದು ಶೀಕೆಗೆ ಮ್ಯಾಜಿಸ್ಟ್ರೇಟರ ಕೋರ್ಟಿನಿಂದ ವಾರಂಟ್ ಬಂತು. ಪ್ರಸಿದ್ಧ ಲಾಯರಾದ ಕು|| ಮೆಣಶಿನಕಾಯಿಯವರ ಅಪ್ಪನೇ ಮೊಖದ್ದಮೆಯನ್ನು ದಾಖಲು ಮಾಡಿಸಿದ್ದನು. ಶೀಕೆ ಅಪರಾಧಿ ಸ್ಥಾನದಲ್ಲಿ ನಿರಪರಾಧಿಯಂತೆ ನಿಂತಿದ್ದಾನೆ; ಕು|| ಮೆಣಶಿನಕಾಯಿ ಉರಿದುರಿದು ಬೀಳುತ್ತಿದಾಳೆ! ಸಾಕ್ಷಾತ್ ಅಪ್ಪನೇ ವಕಾಲತ್ ವಹಿಸಿ ನ್ಯಾಯಾಧೀಶರ ಮುಂದೆ ಒಂಟಿ ಕಾಲಿನಲ್ಲೇ ನಿಂತಿದ್ದಾನೆ! ಇನ್ನೊಂದು ಕಾಲು ಕುರ್ಚಿಯಮೇಲೆ ಕತಕ್ಕಳಿ ಮಾಡುತ್ತಿದೆ! ಕೋಟಿನ ಗುಂಡಿಗಳನ್ನು ತಿರುಚುತ್ತಾ ಎಳೆದಳೆದು ವಾದಮಾಡುತ್ತಿದಾನೆ! ಗುಂಡಿಗಳು ಒಮ್ಮೊಮ್ಮೆ ನುಳಿಚಿಕೊಂಡು ಕೈಗೆ ಸಿಗದೆ ತಪ್ಪಿಸಿಕೊಂಡವು! ಲಾಯರು ಸುಸ್ತಾದರು! ಆಕಾಶ ನೋಡುತ್ತಾ ನಿಂತರು! ತಪ್ಪಿಸಿಕೊಂಡಿದ್ದ ಗುಂಡಿಗಳು ಮತ್ತೆ ಕೈಗೆ ಸಿಕ್ಕಿದವು—ಲಾಯರು ಮತ್ತೆ ಭರ್ಜರಿ ವಾದ ಹೂಡಿದರು. ಅರ್ಭಟಿಸುತ್ತಾ! ಹೀಗೆಯೇ ಹತ್ತಾರು ನಿಮಿಷ ನಡೆಯಿತು. ಈ ಲಾಯರ ವಾದಕ್ಕೂ ಆತನ ಕೋಟಿನ ಗುಂಡಿಗಳಿಗೂ ಅದೆಷ್ಟು ಕೋ-ಅಪರೇಷನ್ !....ಶೀಕೆ ಆಶ್ಚರ್ಯದಿಂದ ನೋಡುತ್ತಲೇ ಇದ್ದ. ಇದೇ ತತ್ವದಮೇಲೇ ಅಲ್ಲವೆ ನಾವು ರೈತ ಬಾಂಧವರಿಗೆ ಅಗ್ರಿಕಲ್ಚರ್ ಮಾಡುವಂತೆ ಪ್ರೇರೇಪಿಸಬೇಕಾಗಿರುವುದು !....ಶೀಕೆಗೆ ಪಂಚಶೂಲಗಳು ಚುಚ್ಚಿ ಎಬ್ಬಿಸಿದಂತಾಯ್ತು! ಅವನು ಕೈಯಲ್ಲಿದ್ದ ಬ್ಲಿಜ್ ಪತ್ರಿಕೆಯ ಮೊದಲನೆ ಹಾಳೆಯಲ್ಲೇ ಇದ್ದ ಚಾ ಎನ್ ಲಾಯ್‌ರವರ ಚಿತ್ರದ ಖಾಲಿ ಹಣೆಗೆ ಭಾರತೀಯ ಸಂಪ್ರದಾಯಕ್ಕನುಸಾರವಾಗಿ T ತಿಲಕವನಿಟ್ಟು ಸಿಂಗರಿಸಿದ ! ಕೇಸು ಅಡ್ಜರ್ನ್ ಆಯಿತು !

'ಪ್ರೇಮವಿಲ್ಲ'ದ ಮುಂದಿನ ಸಾಲಿನಲ್ಲೇ ಇರುವ "ಶ್ವೇತಾಂಬರ ವಾಷಿಂಗ್ ಲಾಂಡ್ರಿ"ಯ ಮಾಲೀಕನಾದ ಸೋಮಣ್ಣ ಶೀಕೆಯ ಆಪ್ತ ಮಿತ್ರ. ಇಸ್ತ್ರಿ ತಿಕ್ಕುತ್ತಿದ್ದ ಸೋಮಣ್ಣನಿಗೆ ಶೀಕೆಯಮೇಲೆ ಅಪಾರ ಕರುಣೆಯುಂಟಾಯಿತು! "ಗುಂಡಿಗಳ ಒಡೆದೆಂಬಂತರ ಗಂಡ" ಎಂದು ಬಿರಿದಾಂಕಿತನಾದ ಸೋಮಣ್ಣನು

ಅಭಿಮಾನದಿಂದ ಶೀಕೆಗೆ ಅಭಯಹಸ್ತ ನೀಡಿ ಲಾಯರುಗಳ ಕೈಲಿ ಸಾಧ್ಯವಾಗದೆ ಇದ್ದುದನ್ನು ಸಾಧಿಸಿ ತೋರಿಸುತ್ತೇನೆ ಎಂದು ಹೇಳಿದ.

ಕು|| ಮೆಣಶಿನಕಾಯಿ V. ಶೀಕೆ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ಕೂಗಿಸಿದರು. ಅಪರಾಧಿ ಹಾಜರಾದ. ಫಿರ್ಯಾದ್‌ದಾರಳಾದ ಕು|| ಮೆಣಸಿನಕಾಯಿ, ಅಪ್ಪನ ಪಕ್ಕದಲ್ಲೇ ನಿಂತಳು! ಒಂಟಿ ಕಾಲಿನಲ್ಲಿ ನಿಂತು ಲಾಯರು ವಾದ ಪ್ರಾರಂಭಿಸಿದರು. ಒಂದೆರಡು ನಿಮಿಷಗಳಲ್ಲಿಯೇ ಎರಡೂ ಕೈಗಳು ಏನನ್ನೋ ಹುಡುಕುತ್ತಾ ಒದ್ದಾಡುತ್ತಿದ್ದವು. ಲಾಯರು ನ್ಯಾಯಾಧೀಶರ ಮುಖವನ್ನು ನೋಡುತಾ ಮಂದಹಾಸ ಬೀರುತ್ತಾ ನಿಂತರು! ಆ ಅರ್ಭಟ, ವಾಚಾಳಿತ್ವ ಎಲ್ಲ ಮಂಗಮಾಯೆ! ನ್ಯಾಯಾಧೀಶರೂ ಬೆಪ್ಪಾಗಿ ಗಡಿಯಾರ ನೋಡಿದರು! ಯಾವುದೋ ಏನೋ ಮಾಯೆಯಾಗಿ ಲಾಯರನ್ನು ಕಾಡುತ್ತಿದೆ! ಕು|| ಮೆಣಶಿನಕಾಯಿ ಕಿಡಿಕಿಡಿಯಾಗಿ ಕೆಂಪಗಾಗಿದ್ದಾಳೆ, ಅಪ್ಪನಿಗೆ ಏನಾಗಿದೆ ಎಂಬುದೇ ಅವಳಿಗೆ ಗೊತ್ತಾಗಲಿಲ್ಲ! ಕಾನೂನು ಕತ್ತೆಯಾಗಿ ಒದೆಯುತ್ತಿದೆ!

ಕಡೆಗೆ ಮ್ಯಾಜಿಸ್ಟ್ರೇಟರೇ ಲಾಯರನ್ನು ಕೇಳಿದರು.

ರುಜುವಾತು ಇಲ್ಲವೇ ಇಲ್ಲ! ಅಲ್ಲವೆ? ಅಂದರು—

ವಾಚಾಳಿ ಲಾಯರು ಹೂಂಗುಟ್ಟುತ್ತಾ ತಲೆ ಆಡಿಸಿದರು. ಅರ್ಥವಾಗದ ಎರಡು ಮಾತಾಡಿದರು! ಮ್ಯಾಜಿಸ್ಟ್ರೇಟರ ಮಾತೇ ಕಡೆಯದಾಯ್ತು. ಲಾಯರು ಪಕ್ಕದಲ್ಲೇ ನಿಂತಿದ್ದ ಮಗಳನ್ನು ನೋಡಿ ಶೀನುತ್ತಾ ದೊಪ್ಪನೆ ಕುರ್ಚಿಮೇಲೆ ಕೂತುಕೊಂಡರು. ನ್ಯಾಯಾಧೀಶರು ಶೀಕೆಗೆ ನೀನು ಹೋಗು ಖುಲಾಸೆ ಮಾಡಿದೇನೆ ಎಂದು ಹೇಳಿ ಟೇಬಲ್ ಮೇಲಿದ್ದ ಕಾಲಿಂಗ್‌ಬೆಲ್ ಗುಂಡಿಯನ್ನು ಬಲವಾಗಿ ಒತ್ತಿದರು!

- ಹಾ. ರಾ.

ಅಮೆರಿಕಾದಲ್ಲಿ ಪ್ರವಾಸಗೈಯ್ಯುತ್ತಿರುವ ಶ್ರೀ ಜಯಚಾಮರಾಜೇಂದ್ರರನ್ನು "ನೀವು ವಿವೇಕಾನಂದರ ಗೋತ್ರದವರೇ" ಎಂದು ಪ್ರಶ್ನಿಸಿದರೆಂಬುದು, ದಿಟವಾಗ ಬಹುದಾದರೂ ಖಚಿತವಾದ ಸುದ್ದಿ ಅಲ್ಲವಂತೆ!

ಲಗ್ನಪತ್ರಿಕೆಗಳ ಸಂಗ್ರಾಹಕ

ಉದ್ದಿನವಡೆ ಚಟ್ನಿ ತಿಂದ ಮೇಲೆ ಮಾಣಿ ಬಲು ದೂರಾಲೋಚನೆಯಿಂದ ಎರಡು ಚೂರು ಕಾಗದ ತಂದುಕೊಟ್ಟ, ನಮ್ಮ ಕೈ ಒರೆಸಿಕೊಳ್ಳಲು. ನನ್ನ ಪಾಲಿಗೆ ಬಂದ ಕಾಗದದ ಚೂರಿನಿಂದ ಕೈಯನ್ನು ತಿಕ್ಕುತ್ತಿದ್ದಾಗ, ಶಾಮು ತನ್ನ ಕೈಲಿದ್ದ ಕಾಗದದ ಚೂರನ್ನು ಎಡಗೈ ಎರಡೇ ಬೆರಳಲ್ಲಿ ಹಿಡಿದುಕೊಂಡು ಓದಲು ಶುರು ಮಾಡಿದ್ದ. "ಏನೋ! ಅಷ್ಟು ಆಸಕ್ತಿಯಿಂದ ಓದುತ್ತಾ ಇದಿ; ಏನಿದೆಯೋ?" ಅಂದೆ. ಹಳೇ ಕಾಲದ ಲಗ್ನಪತ್ರಿಕೆ ಕಣೋ ೧೮೫೫ರಲ್ಲಿ ನಡೆದ ಮದುವೆಯದು. ಕೈಬರಹದಲ್ಲಿ ಬರೆದಿರುವುದು, ಎಷ್ಟು ಮುದ್ದಾದ ಅಕ್ಷರ ಅಂತೀ! ಎಲ್ಲೋ ಹಳೇ ಕಡತಗಳಲ್ಲಿ ಬಿದ್ದಿರಬೇಕು. ಹಳೇ ಕಾಗದದವರಿಗೆ ಮಾರಿರಬೇಕು. ಅಂತೇ ಈ ಹೋಟಲಿನವನಿಗೆ ಸಿಕ್ಕಿರಬೇಕು. ನನ್ನ ಸಂಗ್ರಹಕ್ಕೆ ಇದೊಂದು ಅಮೂಲ್ಯ ಮಾಲು ಎಂದು ಹೇಳಿ ಮಾಣಿಯ ಕೈಲಿ ಬೇರೆ ಕಾಗದದ ಚೂರು ತರಿಸಿಕೊಂಡು, ಕೈ ಬೆರಳೆಲ್ಲಾ ಒರೆಸಿಕೊಂಡ. ಹಳೇ ಲಗ್ನಪತ್ರಿಕೆಯನ್ನು ನೂರು ರೂಪಾಯಿನ ನೋಟಿನಂತೆ ಹುಷಾರಾಗಿ ಮಡಿಸಿ ಹಣದ ಪರ್ಸಿನಲ್ಲಿಟ್ಟುಕೊಂಡ. "ನಿನಗೆ ಈ ಚಾಳಿ ಹಿಡಿದಿದೆ ಅಂತ ನನಗೆ ತಿಳಿದಿರಲಿಲ್ಲ ಕಣೋ, ಎಷ್ಟು ದಿವಸಗಳಿಂದ ಈ ಬೇನೆ?" ಎಂದು ಕೇಳಿದೆ.

ಶಾಮು ವಿವರಿಸಿದ, ಬಾದಾಮಿ ಹಾಲನ್ನು ತೊಟ್ಟುತೊಟ್ಟಾಗಿ ಕುಡಿಯುತ್ತಾ. "ನನ್ನ ಲಗ್ನಪತ್ರಿಕೇನ ಮೊದಲು ನೋಡಿದಾಗ ಏನೋ ಒಂದು ತರಹ ಆಯಿತು ಹೊಟ್ಟೇಲಿ, ಅದೇನು ಸಂಕಟವೋ ಸುಖದ ಚಿಹ್ನೆಯೋ ಒಂದೂ ಆಗ ತಿಳಿಯಲಿಲ್ಲ. ಮದುವೆಯಾದ ಎರಡು ದಶಕದಲ್ಲಿ ಅರ್ಥವಾಯಿತು ಅದು ಪಿತ್ತಸಂಕಟ ಅಂತ. ವಾಂತಿಯಾದರೇನೇ ಕ್ಷೇಮ ಅಂತ. ಯಾಕೆ ಹೀಗಾಯ್ತು ಅಂತ ನೀ ಕೇಳಬಹುದು. ನನ್ನ ಮಾವನವರು ಸಕಲರಿಗೂ ಹಂಚಿದ ಲಗ್ನಪತ್ರಿಕೆಯ ಕೊನೆಯಲ್ಲಿ "ತಮ್ಮೆಲ್ಲರ ವಧೇಯ" ಅಂತ ಅಚ್ಚಾಗಿತ್ತು.

ಆವಾಗಿನಿಂದ ಲಗ್ನಪತ್ರಿಕೆಗಳನ್ನು ಸಂಗ್ರಹಿಸುತ್ತಿದ್ದೇನೆ. ಲಗ್ನವಾದವರ ಜೀವನದ ಪಥವನ್ನು, ಬಾಳದೋಣಿಯ ತೂರಾಟವನ್ನು ಗಮನಿಸಿ, ಹೀಗೆ ಹೀಗೆ ಲಗ್ನಪತ್ರಿಕೆಗಳಿದ್ದರೆ, ಈ ರೀತಿ ಅವರ ಬಾಳು ಸಾಗುತ್ತದೆ ಎಂದು ಸುಮಾರು ಕರಾರುವಾಕ್ಕಾಗಿ ಭವಿಷ್ಯ ಹೇಳಬಲ್ಲೆ. ಇದರಿಂದಲೇ ಒಂದು ಕಸುಬನ್ನೂ ನಿರ್ಮಿಸ ಬಹುದು. ಈ ರೀತಿ ಲಗ್ನಪತ್ರಿಕೆ ಬರೆಸಿದರೆ ಈ ರೀತಿ ಬಾಳಬಹುದು. ಇಂತಹ ಅಕ್ಷರ ಇಷ್ಟು ಸಂಖ್ಯೆಯಲ್ಲಿದ್ದರೆ ಮೊದಲ ದಾಂಪತ್ಯ ಜೀವನ ಎರಡು ವರ್ಷ ಸುಖ, 'ಕ್ಷ' ಎನ್ನುವ ಅಕ್ಷರ ಲಗ್ನಪತ್ರಿಕೆಯಲ್ಲಿ ನಾಲವತ್ತಕ್ಕಿಂತ ಹೆಚ್ಚಿದ್ದರೆ, ಹೆಂಡತಿಗೆ ೨೨ಕ್ಕೆ ಕ್ಷಯ ತಗಲುತ್ತೆ, ೬ನೇ ಬಾಣಂತನದಲ್ಲಿ 'ಹೆ' ಅಕ್ಷರ ಮೂವತ್ತು ಬಾರಿ

ಬಂದರೆ ಮೂರು ಅವಳಿ ಜವಳಿ ಮಕ್ಕಳಾಗುತ್ತೆ. ಮೂರು ಜತೆ ಮಕ್ಕಳೂ ಧೃಡ ಕಾಯರಾಗಿ ಬೆಳೆದು ಬಾಳುತ್ತವೆ. ತಾಯಿಮಾತ್ರ ಇದ್ದ ಕೂಟವೂ ಇಲ್ಲ.' ಹೋಗಿ ತಿಥಿಯೂಟವನ್ನೂ ಒದಗಿಸುಲ್ಲ. ಹೀಗೆಲ್ಲಾ ಬಲು ಬಲು ಗೂಢವಾದ ಅಂಶಗಳನ್ನು ಕಂಡುಹಿಡಿದಿದ್ದೆ. ಸಾಕಾರಣವಾಗಿ ಅಂಕಿ ಅಂಶಗಳ ಸಹಾಯದಿಂದ ನಿರ್ಣಯಿಸಿದ್ದೆ.

ಆದರೆ ನೋಡು ಈಚೀಚೆಗೆ ನವ್ಯ ತರಹ ಲಗ್ನಪತ್ರಿಕೆಗಳು ಬರಲಾರಂಭಿಸಿವೆ. ಅವುಗಳಲ್ಲಿ, ನನ್ನ ಪ್ರಯೋಗಗಳು ಅಷ್ಟಾಗಿ ಯಶಸ್ವಿಯಾಗಿಲ್ಲ. ಅದಕ್ಕೇ ಹಿಂದೇಟು ಹಾಕುತ್ತಿದ್ದೇನೆ. ನನ್ನ ಪರಿಶೋಧನೆಯ ಫಲಿತಾಂಶಗಳನ್ನು ಎಂದು ಹೇಳಿದ.

"ಅಂತಹ ನವ್ಯ ಲಗ್ನಪತ್ರಿಕೆಗಳು ಯಾವುದಯ್ಯಾ?" ಎಂದೆ.

"ಬಾ ಮನೆಗೆ ಹೋಗೋಣ. ನನ್ನ ಸಂಗ್ರಹ ತೋರಿಸುತ್ತೇನೆ. ಎರಡು ತೆಕ್ಕೆಗಳಿವೆ. ಹಳೆಯ ಮಾದರಿಯವು ಒಂದು. ನವ್ಯದ್ದು ಎರಡನೆಯದು." ಎಂದು ಹೇಳಿ ತಾನೆದ್ದು, ಮುಂದೆ ಹೋದ. ತಿಂದ ತಿಂಡಿ ತೀರ್ಥಕ್ಕೆ ಹಣ ಪಾವತಿ ಮಾಡಿ ನಾನೂ ಅವನನ್ನು ಹಿಂಬಾಲಿಸಿದೆ.

* * * *

ಮನೆಯಲ್ಲಿ ತನ್ನ ನವ್ಯ ಸಂಗ್ರಹವನ್ನು ತೋರಿಸಿದ.

ಮೊದಲನೆಯದು ಈ ರೀತಿ ಇತ್ತು.

— ೧ —

ಶ್ರೀ ಪಾಂಡುರಂಗಿ.

ಹಿಂದು—೨೯—ಗಂಡು.

ಕುಮಾರಿ ಬಸವಿ	೫
ಕುಂಕುಮ	ಡ್ರಾಂ ೨
ಅರಶಿನ	ಡ್ರಾಂ ೩/೮
ಪೌಡರ್	ಮಣ ೧
ಚಪ್ಪಲಿ	೫"

ಚೆನ್ನಾಗಿ ಕುಲುಕಿ, ಸೇವಿಸಬೇಕು.

ಈ ರೀತಿ ಭವರೋಗ ವೈದ್ಯರು ಅಣತಿ ಇತ್ತಿದ್ದಾರಾಗಿ ತಾವೆಲ್ಲರೂ ಶನಿವಾರ ಬೆಳಿಗ್ಗೆ ಗಂಟೆ ಎಂಟಕ್ಕೆ ಆಸ್ಪಿನಾಲಯಕ್ಕೆ ಬರಬೇಕೆಂದು ರೋಗಿ ಔಷಧಿ ಇಬ್ಬರನ್ನೂ ಹರಸಬೇಕೆಂದೂ ಆದರದಿಂದ ನಿಮ್ಮನ್ನು ಕಾಡಿ ಬೇಡುವೆವು.

ಉಭಯಕುಲ ಮಾತಾಪಿತೃಗಳು.

ವಿ. ಸೂ.—ಮಕ್ಕಳಿರುವ ಮನೆಯವರು ಈ ಆಹ್ವಾನ ಪತ್ರಿಕೆಯನ್ನು ಕಾಯ್ದಿರಿಸಿರಿ. ಎಂದಾದರೂ ಉಪಯೋಗಕ್ಕೆ ಬರುತ್ತೆ.

"ನೀ ಹೇಳಿದ್ದು ದಿಟ ಶಾಮು! ಈ ನವ್ಯ ಲಗ್ನಪತ್ರಿಕೆ ನೋಡಿದರೆ ಡಾಕ್ಟರು ಕೊಡುವ ಔಷಧಿ ಚೀಟಿ ತರಹಾ ಇದೆಯಪ್ಪಾ. ಪಾಂಡುರಂಗಿ ಅಪ್ಪ ಅಥವಾ ಅಮ್ಮ ಡಾಕ್ಟರಿರಬೇಕು. ಹಾಗೂ ಕುಮಾರಿ ಬಸವಿ ಅಮ್ಮ ಅಥವಾ ಅಪ್ಪ ಡಾಕ್ಟ ರಾಗಿರಬೇಕು" ಎಂದೆ.

ಹೌದಲ್ಲೋ ಇದು ತೋಚಲೇ ಇಲ್ಲವಲ್ಲೋ! ಇಂತಹ ಅಕ್ಷರ ಇಷ್ಟು ಸಂಖ್ಯೆ ಯಲ್ಲಿದ್ದರೆ ಎಂದೆಲ್ಲಾ ಹಳೇ ಪ್ರಯೋಗದಲ್ಲೇ ಇದ್ದೆನಲ್ಲಾ! ದಿಟ ಕಣೋ. ಪಾಂಡು ರಂಗಿ ಅಮ್ಮ ಡಾಕ್ಟರು. ಕುಮಾರಿ ಬಸವಿ ತಾನೇ ಡಾಕ್ಟರು. ಕಾಂಪೌಂಡರದೇ ಪೌರೋಹಿತ್ಯ. ದಾದಿಗಳದೇ ಓಲಗ, ರೋಗಿಗಳದೇ ಸಭೆ. ಶೀಷೆಗಳಲ್ಲೇ ಪಾಯಸ ಕುಡಿಸಿದರು.

ನೀನು ಜಾಣ ಕಣೋ! ಎಷ್ಟು ಬೇಗ ಗುರ್ತು ಹಿಡಿದೆ!

ಇದನ್ನು ನೋಡಿ ನಿನ್ನ ಟೀಕೆಮಾಡು ಎಂದು ಶಾಮು ಹೇಳುತ್ತಾ ಎರಡನೆಯ ನವ್ಯ ಲಗ್ನಪತ್ರಿಕೆಯನ್ನು ಮುಂದಿಟ್ಟ.

— ೨ —

ಸತ್ಯ! ಏವ ಜಯತೇ

ಎರಡಕ್ಕೆ ಅರಳಿಮರದ ಮನೆ, ಬಲಕ್ಕೆ ಶಿಸ್ತುಗಾರ ಸಣ್ಣಸಾಮಿ ಬಂಗಲೆ ಮುಂದೆ ಆರನೇ ಅಡ್ಡರಸ್ತೆ. ಹಿಂದೆ ಏಳನೇ ಅಡ್ಡರಸ್ತೆ. ಈ ರೀತಿ ಚಚ್ಚೌಕಟ್ಟಿ ನಲ್ಲಿರುವ ಜತೆ ಸಂಪಿಗೆ ಮರದ ಮನೆಯಲ್ಲಿರುವ ರಾಮರಾಯನ ಮಗಳು ಕುಮಾರಿ ಸತ್ಯ.

ಎಡಕ್ಕೆ ಆಸ್ಪತ್ರೆ, ಬಲಕ್ಕೆ ಆಂಜನೇಯನ ದೇವಸ್ಥಾನ, ಮುಂದೆ ೧೬ನೇ ಪ್ರಧಾನ ರಸ್ತೆ, ಹಿಂದೆ ಕತ್ತೆಗಳ ಪಾಳ್ಯ ಈ ಚಚ್ಚೌಕಟ್ಟಿನಲ್ಲಿರುವ ಭೀಮರಾಯರ ಮಗ ಘಟಾನಾಥ.

ಇವರಿಬ್ಬರ ಪರಸ್ಪರ ಪ್ರಾಣಿಗ್ರಹಣವು, ಎಡಕ್ಕೆ ಹಳ್ಳ, ಬಲಕ್ಕೆ ಕೊಳ್ಳ, ಮುಂದೆ ಹಸಿರಿಲ್ಲದ ಪಾರ್ಕು, ಹಿಂದೆ ಹುಚ್ಚಾಸ್ಪತ್ರೆ ಈ ಚಚ್ಚೌಕಟ್ಟಿನಲ್ಲಿರುವ, ಕಿರುಚುಕಮ್ಮಿ ಛತ್ರದಲ್ಲಿ.

ಪ್ರಾತಃಕಾಲ ಸೂರ್ಯೋದಯಾನಂತರ ೨ ತಾಸು, ಮಟಮಟಮಧ್ಯಾಹ್ನಕ್ಕೆ ಮುಂಚೆ ೧ ತಾಸು, ಈ ಅಂತರದಲ್ಲಿ ನಡೆಯಲು ಸಕಲ ಸಿದ್ಧತೆಗಳೂ ಆಗಿವೆ. ತಾವು ಬಂದು ಎಲಡಿಕೆ ತೆಂಗಿನಕಾಯಿ ತೆಗೆದುಕೊಂಡು ಹೋಗಬೇಕೆಂದು ಪ್ರಾರ್ಥಿ ಸುತ್ತೇವೆ.

ರಾಮರಾಯ ಸೀತಾಬಾಯಿ.
ಭೀಮರಾಯ ಹೀರಾಬಾಯಿ, ಸೋನಾಬಾಯಿ.

ಎರಡು ನಿಮಿಷ ಯೋಚಿಸಿ,

"ಇಬ್ಬರೂ ಸರ್ವೆ ಇಲಾಖೇಲಿ ಕೆಲಸದಲ್ಲಿದ್ದಾರೆ. ವಧೂವರರಿಗೆ ಅಕ್ಕಿಕಾಳು ಹಾಕುವ ಮೊದಲು ಆಜೂಬಾಜು ಹಿಂದುಮುಂದು ನೋಡಿಯೇ ಹಾಕೋ ಆಸಾಮಿಗಳು. ರಾಮರಾಯ ಬಲು ಜೋರಿನ ಆಸಾಮಿ ಇರಬೇಕು ಅದಕ್ಕೆ ಘಟಾನಾಥನನ್ನ ಮದಿವಿ ಆದರೂ ಮಗಳು ಸತ್ಯ ಜಯಗಳಿಸುತ್ತಾಳೆ ಎಂದು ಘಂಟಾಘೋಷವಾಗಿ ಹೇಳಿದ್ದಾನೆ. ಹೆಸರಿಗೆ ಭೀಮರಾಯನಾದರೂ, ಘಟಾನಾಥನ ತಂದೆಯಾದರೋ, ಇಬ್ಬರು ಬಾಯಿಯರ ದವಡೆಯಲ್ಲಿ ಸಿಕ್ಕಿ ಲಗ್ನಪತ್ರಿಕೇಲಿ ಅಚ್ಚಿಗೆ ಸಿಕ್ಕಿದ್ದಾನೇ ಹೊರತು, ಲಗ್ನದಲ್ಲಿ ಅವ ನಿಕೃಷ್ಟ. ಅಂದಮೇಲೆ ಭೀಮರಾಯ ಲಂಚ ತೆಗೆದುಕೊಂಡಾಗ ಅವನ ಅಧಿಕಾರಿಯಾದ ರಾಮರಾಯನ ಕೈಗೆ ಸಿಕ್ಕಿಬಿದ್ದಿರಬೇಕು. ಮಾಫಿಯಾದ ಕಾರಣ ಮದಿವಿಗೆ ಒಪ್ಪಿರಬೇಕು" ಎಂದು ಅಂತರಾರ್ಥ ಹೇಳಿದೆ.

ಶಾಮು ಬಾಯಿ ತೆರೆದು ನೋಡುತ್ತಿದ್ದವ, ದವಡೆ ಜಾರಿದವರ ರೀತಿ ಹಾಗೇ ಅವಾಕ್ಕಾದ. ಕಡೆಗೆ ಹೇಳಿದ, "ಹೌದಲ್ಲೋ! ರಾಮರಾಯರು ಸರ್ವೆ ಸೂಪರ್-ವೈಜರು, ಭೀಮರಾಯ ಅವರ ಕೈಕೆಳಗೆ ಬಾಂದಿನವನು ಸತ್ಯ ಶಾಲಾಮಾಸ್ತರಿಣಿ, ಸಂಬಳ ತಿಂಗಳಿಗೆ ೧೨೫-೧೦-೨೦೦. ಘಟಾನಾಥ ನಗದಿ ಗುಮಾಸ್ತ ಸಂಬಳ ತಿಂಗಳಿಗೆ ೩೦-೧-೪೦.

ಲೋ! ನೀನಾದರೂ ಈ ನಮ್ಮ ಲಗ್ನಪತ್ರಿಕೆಗಳ ಭವಿಷ್ಯ ಹೇಳೋದಕ್ಕೆ ಶುರು ಮಾಡೋ. ಆ ಶಕ್ತಿಯನ್ನೂ ಚಾಲೂಕನ್ನೂ ಭಗವಂತ ನಿನಗೆ ದಯಪಾಲಿಸಿದ್ದಾನೆ ಅಷ್ಟೆಲ್ಲಾ ವರ್ಷ ಏನೆಲ್ಲಾ ಸಂಶೋಧನೆ ನಡೆಸಿದರೂ ಕೂಡ ಈ ನಮ್ಮ ಲಗ್ನಪತ್ರಿಕೆಗಳು ಬಂದಾಗ, ನಾನು ನಿಶ್ಶಾಸ್ತ್ರೀಕನಾದೆ.

ಬೇಕಾದರೆ ಈ ಸಂಗ್ರಹವನ್ನೆಲ್ಲಾ ನಿನಗೇ ಬಹುಮಾನವಾಗಿ ಮುಫತ್ತು ಕೊಡುತ್ತೇನೆ ಎಂದ ಶಾಮು.

ಆಗುಲ್ಲಪ್ಪಾ! ನನಗಿನ್ನೂ ಲಗ್ನವಾಗಿಲ್ಲವಲ್ಲ! ಈ ಹವ್ಯಾಸ ಶುರು ಹಚ್ಚಿದರೆ, ನನ್ನ ಲಗ್ನಪತ್ರಿಕೇ ನಾನೇ ನೋಡಿದರೆ ಲಗ್ನಪತ್ರಿಕೆ ಆದ ಮೇಲೆ, ಲಗ್ನಕ್ಕೆ ತುಂಡು ಹಾಕಬೇಕಾಗುತ್ತೆ. ಆದ್ದರಿಂದ ಅದೃಷ್ಟ ಭವಿಷ್ಯದಲ್ಲಿ ಕುರುಡು ನಂಬಿಕೆ ಇಟ್ಟರೆ, ಬದುಕಬಹುದು. ಭವಿಷ್ಯವೆಲ್ಲಾ ಕಣ್ಣಿಗೆ ಕಂಡರೆ ಇವತ್ತೇ ಭಾವಿಗೆ ಬೀಳೋ ಹಾಗೆ ಆಗಬಹುದು."

ಎಂದು ಅವನನ್ನು ಸಮ್ಮತಿಸಿ, ಜಾರಿಕೊಂಡೆ.

—ಬಚ್ಚ

ರಷ್ಯನ್ ಕಲಿತ ಮೈನಾ

["It seems to me she speaks Russian with a slight Indian accent," Mr. Obraztsov told, "But I am sure practice will make her perfect."........................]

ಗೊಂಬೆ ಕುಣಿತದ ಸೋವಿಯತ್ ಪಟು ಕಾ. ಸರ್ಜಿ ಅಬ್ರೋಸ್ತ್ ಜೋವ್ ದೆಹಲಿಗೆ ಬಂದಿದ್ದಾಗ ಜುಮ್ಮಾ ಮಸೀದಿಯ ಮುಂದೆ ಮೈನಾ ಒಂದನ್ನು ಕೊಂಡು ಕೊಂಡು ಜೆಟ್ ವಿಮಾನದಲ್ಲಿ ರಷ್ಯಾಕ್ಕೆ ಒಯ್ದು ಅದಕ್ಕೆ ರಷ್ಯನ್ ಕಲಿಸಿದ್ದಾರಂತೆ. ಅದರ ಉಚ್ಚಾರಣೆ ಭಾರತೀಯವಾಗಿದ್ದರೂ, ಅಭ್ಯಾಸ ಬಲದಿಂದ ಅದೆಲ್ಲಾ ಸರಿಹೋಗಬಹುದೆಂದು ಅವರು ಹೇಳಿದ ಮಾತುಗಳನ್ನು ಈ ಮೇಲೆ ಉದ್ಧರಿಸಿದ್ದೇವೆ. ಈ ಸುದ್ದಿಯನ್ನೋದಿ ನಮ್ಮ ಮನಸ್ಸಿನಲ್ಲಿ ಅನೇಕ ಸಂದೇಹಗಳೆದ್ದಿವೆ. ಇದಕ್ಕೆ ಕಾರಣಗಳಿಲ್ಲದಿಲ್ಲ.

ಬಹು ಹಿಂದೆ ಭಾರತಕ್ಕೆ ಬಂದಿದ್ದ ಆ್ಯಂಟನ್ ಯಾಕೋವಿಚ್ ಕುಕ್ಕೂ ಮರಿಯೊಂದನ್ನು ಒಯ್ದ ಕಥೆಯನ್ನು ಯಾರೋ ನನಗೆ ಹೇಳಿದರು. ಅದನ್ನು ಒಯ್ಯುತ್ತಿದ್ದಾಗ ದಾರಿಯಲ್ಲಿ ಇದು ಯಾಕೋ ಕುಕ್ಕೂ ಇದ್ದ ಹಾಗಿಲ್ಲ ಎನ್ನಿಸಿದರೂ ಆ್ಯಂಟನ್ ಊರಿಗೆ ಒಯ್ಯುವಷ್ಟರಲ್ಲಿ ಅದೆಲ್ಲಾ ಸರಿಹೋಗಬಹುದೆಂಬ ಅಚಲ ವಿಶ್ವಾಸವನ್ನಿಟ್ಟುಕೊಂಡು ಮುಂದುವರಿದರು. ಆದರೆ ಆ ಪಕ್ಷಿ ಎಷ್ಟು ಅಭ್ಯಾಸ ಮಾಡಿದರೂ ಕುಕ್ಕೂ ಮರಿಯಾಗಲು ಸಾಧ್ಯವಾಗಲಿಲ್ಲ. ಅದು ಎಂದೆಂದೂ ಆಗಿದ್ದಂತೆ ರಷ್ಯಾಕ್ಕೆ ಹೋದಮೇಲೂ ಉಲ್ಲೂ ಮರಿಯಾಗಿತ್ತು. ಅದು ಮಧ್ಯ ಯುಗ ರಾಯಭಾರಿ ಕಛೇರಿಗಳೂ ದುಭಾಷೀಗಳೂ, ಪಕ್ಷಿ ಶಾಸ್ತ್ರಜ್ಞರೂ ಸಿಕ್ಕದ ಸ್ವತಃ ಪಕ್ಷಿ ಶಾಸ್ತ್ರಜ್ಞರಲ್ಲದ ಯಾಕೋವಿಚ್ಚರಿಗೆ ಹಾಗಾಗಿದ್ದರೆ ಆಶ್ಚರ್ಯವೇನಲ್ಲ.

ಕಾ. ಐವಾನ್ ಐವಾನೋವಿಚ್‌ರಿಗೆ ಆದ ಅನುಭವ ಬೇರೇರೀತಿಯದು. ಅವರು ಒಯ್ದ ಕೋಗಿಲೆ "ಕಾಮ್ರೇಡ್, ಕಾಮ್ರೇಡ್" ಎಂದು ಕೂಗುತ್ತಿದ್ದುದರಿಂದ ಅದಕ್ಕೆ "ಕುಹೂ.... ಕುಹೂ...." ಎಂದು ಕೂಗುವುದನ್ನು ಬಿಡಿಸುವ ಕಷ್ಟವೇ ತಪ್ಪಿದು ಎಂದು ಅವರೆಂದುಕೊಂಡರು. ಅವರು ರಷ್ಯಾಕ್ಕೆ ಹೋದಮೇಲೆ ದುಭಾಷಿಯಾ ಆದ ಅವರ ಮಿತ್ರ, "ಐವಾನಾ, ಕೋಗಿಲೆ ಕಲಿಯಬಹುದಾದ

ಶಬ್ದಗಳು ಎರಡೇ ಒಂದು—ಕುಹೂ, ಎರಡು—ಚಿಕ್ಕಮ್ಮ. ಇದು ಕಾಮ್ರೇಡ್—ಎಂದು ಕೂಗುತ್ತಿರುವುದರಿಂದ ಇದು ಕೋಗಿಲೆಯ ಚಿಕ್ಕಮ್ಮ." ಎಂದು ಹೇಳಿದ. ಆದರೆ ಸಮತಾವಾದಿ ತತ್ವದಲ್ಲಿ ಸಂಪೂರ್ಣ ನಿಷ್ಠರೂ—ಪಾರ್ಟಿವಕ್ತಾರರೂ ಆದ ಐವಾನೋವಿಚ್ಚರು—"ಇದುವರೆಗೆ ಇದು ಬೂರ್ಜ್ವಾ ಸಮಾಜದಲ್ಲಿದ್ದುದರಿಂದ ಕೋಗಿಲೆಯ ಚಿಕ್ಕಮ್ಮನಾಗಿರಬಹುದು. ಆದರೆ, ಸಮತಾವಾದದ ಅಭ್ಯಾಸದಿಂದ ಇದು ಕೋಗಿಲೆಯಾಗುತ್ತದೆ." ಎಂದರಂತೆ.

ಕಾ. ಸರ್ಜಿ ಅಬ್ರಾಸ್ತ್‌ಜೋವ್‌ರವರು ಅಂತಹ ತಪ್ಪನ್ನೇನೂ ಮಾಡಿಲ್ಲದಿರಬಹುದು. ಆದರೆ, ಅವರ ಹೇಳಿಕೆ ಕೊಂಚ ಅಸ್ಪಷ್ಟವಾಗಿದೆ. ಮೈನಾ ಉಚ್ಚಾರಣೆ, ಭಾರತೀಯವಾಗಿದೆ. ಎಂದರೇನು ? ಗುಜರಾತೀಯವೋ ? ಮದರಾಸೀಯವೋ ಬಂಗಾಳೀಯವೋ ? ಹಾಗಿದ್ದರೆ ಆ ಮೈನಾ, ಗೀಜಗವೋ ಕಬ್ಬಕ್ಕಿಯೋ ಸೊಳ್ಳಿಯೋ ಆಗಿರ........! ಅಬ್ರಾಸ್ತ್‌ಜೋವ್, ಅಷ್ಟು ? [ಚರಿತ್ರೆಯ ಪುನರಾವೃತ್ತಿ ಆಗಿರದಿರಲಿ !]

ಮೈನಾ ಉಚ್ಚಾರಣೆ ದಾವಣಗೇರೀಯವಾಗಿದ್ದರೆ? ಇದೀಗ ನನ್ನ ಮನಸ್ಸಿನೊಳಗಿರುವ, ನಿಜವಾದ, ಭಾರೀ ಸಂಶಯ.
ಒಂದು ಕಥೆ ಕೇಳಿ :—

ಕೆಲವು ವರ್ಷಗಳ ಹಿಂದೆ ನಾನು ಮೆ.ಲ್ಕಂಡ ಊರಿನ ಬೆಲ್ಲದ ಮಂಡಿಯೊಂದರಲ್ಲಿದ್ದೆ. ಅಲ್ಲಿ ನನ್ನ ಸಹೋದ್ಯೋಗಿಗಳು ಅನೇಕ ಅವರಲ್ಲಿ ಪ್ರಸ್ತುತ ಕಥಾನಾಯಕ ಕಾ. ಗೌಡ. ಮಧ್ಯ ಆಫ್ರಿಕಾದ ಬುಡಕಟ್ಟೊಂದರ ಗೌಡನಾಗಿದ್ದನೆಂದು ವದಂತಿ. ಗೌಡನನ್ನು ಜೂ ಒಳಗೆ ಇಡಬೇಕೆಂದು ಸಾಹುಕಾರರು ಅನೇಕಬಾರಿ ಹೇಳಿದ್ದನ್ನು ಕೇಳಿದ್ದೇನೆ. ಅವನ ಧ್ವನಿ ಐವನೋವಿಚ್ ಒಯ್ದು ಐಕ್ಷಿಯಂತಹದು. ಇಂತಹ ಗೌಡನನ್ನು ಒಮ್ಮೆ ಪಲ್ಲಕ್ಕೆ ನಲವತ್ತರಂತೆ, ಒಂದು ಸಾವಿರ ಚೀಲ ಉದ್ದಿನಬೇಳೆ ಖರೀದಿಮಾಡಲು ಸಿಕಂದರಾಬಾದಿಗೆ ಕಳುಹಿಸಿದ್ದರು. ಗೌಡ ಸಿಕಂದರಾಬಾದಿನಿಂದ ಫೋನುಮಾಡಿ ಹೇಳಿದ. "ನೀವೇಳಿದ್ರೇಟಿಗೆ ಇಲ್ಲಿ ಮಾಲಿಲ್ರೀ ಇಪ್ಪತ್ತ್ರುಪಾಯಿ ಯತ್ತ್ಯಾಸೈತಿ." ಸಾಹುಕಾರರು "ರಾಯ್ರೇ, ಇನ್ನೇನ್ರಷ್ಯನ್ ಮಾತಾಡ್ತನೇನ್ರೀ ? ನಂಗಂತೂ ತಿಳೀಲೊಲ್ಲದು. ನೀವೇ ಮಾತಾಡ್ರಿ. ಈ ಮುಬ್ಗನ್ಹತ್ರ ಕಸಂಗಿ ನನ........ಗ" ಎಂದು ನನ್ನ ಕಡೆಗೆ ತಿರುಗಿ ಹೇಳಿದರು.

ಮೇಲ್ಕಂಡ ಕಥಾನಾಯಕ ಹಸೇ ಕಡಲೆ ಖರೀದಿಮಾಡಲು, ರಷ್ಯ ಗೊಂಬೆ ಕುಣಿತದವರು ಬಂದ ಸುಮಾರಿನಲ್ಲಿ ಪಂಜಾಬಿಗೆ ಹೋಗಿದ್ದ. ಸಾಹುಕಾರರಿಗೆ

ತಿಳಿಸದೇ ಅವನು ಭಟಿಂಡಾದಾರಿಯನ್ನು ಬಿಟ್ಟು ದೆಹಲಿಗೆ ಹೋಗಿದ್ದ. ಅಲ್ಲಿಂದ ನನಗೆ ಕಾಗದ ಬರೆದ "ಲೇ, ರಾಯಾ, ಬೆಷ್ಗ ಮಂಗ್ಯಾನ. ...ನೇ, ಕುರಿಯೇ, ನಿಂಗೆ ನಿಟ್ಟಳ್ಳಿನೇ ಗತಿ. ದೆಲ್ಲಿಗ್ಬಂದದಿನೋ ಇವತ್ಜುಮ್ಮಾ ಮಸೀದಿ ನೋಡಕ್ಕೊ ಕುನೀ. ಅಲ್ಲಿಂದ......" ಎಂದು ಮುಂತಾಗಿ ತಿಳಿಸಿದ್ದ. ನನ್ನ ಸಂಶಯ ಅಬ್ರಾಸ್ತಿಜೋವ್ ಗೌಡನನ್ನೇ ಏಕೆ !!!

ಗೌಡ ಹಕ್ಕಿ ಇದ್ದ ಹಾಗಿಲ್ಲ—ಎಂಬುದನ್ನು ನಾನು ಬಲ್ಲೆ ಆದರೆ ಕೃಷೇವ್ ಸ್ಟಾಲಿನ್ ಇದ್ದಹಾಗಿರುವರೇ ? ಮತ್ತೆ ಅವರನ್ನೇ ಸ್ಟಾಲಿನ್ ಪದವಿಗೇರಿಸಲಿಲ್ಲವೇ ? ನನ್ನ ವಾದ ಪ್ರಬಲವಾದುದಲ್ಲವೆಂಬುದನ್ನು ನಾನು ಬಲ್ಲೆ. ಆದರೂ ಗೌಡನಿಗೆ ಛಾನ್ಸ್ ಹತ್ತಿರಬಾರದೇಕೆ ?

ಅವನಿಗೆ ಆಬ್ರಾಸ್ತಿಜೋವ್‌ರವರು ರಷ್ಯನ್ ಕಲಿಸಲು ಹೋದರೆ ಅವರು ವಿಫಲವಾಗುವುದರಲ್ಲಿ ಸಂಶಯವೇ ಇಲ್ಲ. ಉಚ್ಚಾರಣೆ ರಷ್ಯನ್ ಆಗಬಹುದು. ಭಾಷೆಮಾತ್ರ ಎಂದೆಂದಿಗೂ ಕನ್ನಡವೇ. ಅಲ್ಲದೇ ಗೌಡನಿಗೆ ಏನನ್ನಾದರೂ ಕಲಿಸಲು ಸಾಧ್ಯವೇ ? ವ್ಯಾಪಾರಮಾಡುವುದನ್ನು ಇಪ್ಪತ್ತು ವರ್ಷಗಳಕಾಲ ಸಕ್ಕರ್ ಅವನಿಗೆ ಕಲಿಸಿದ ಸಾಹುಕಾರರನ್ನು ಕೇಳಿನೋಡಿ.

ಅಂತೂ ಗೌಡ ಜೆಟ್ ವಿಮಾನದಲ್ಲಿ ಹಾರಿ ರಷ್ಯಾ ತಲುಪಿದ. ನಾನಾದರೋ ದಾವಣಗೆರೆ ಲಾರೀ ಗಾಡಿಯನ್ನು ಬಿಟ್ಟು ಇನ್ನೇನನ್ನೂ ಹತ್ತಿಲ್ಲ. ನಾನೇನು ತಪ್ಪುಮಾಡಿದ್ದೆ ? ದೊಡ್ಡವರ ಸಲಹೆಯಂತೆ ನಡೆದುಕೊಂಡುದೇ ಹೀಗಾಗಲು ಕಾರಣವಾಯಿತು. ಮೈಸೂರಿಗೆ ಹೋದಾಗ ಜೂಗೆ ಹೋಗಬೇಡ. ಹೋದರೆ ನಿನ್ನನ್ನು ಅವರು ಹೊರಗೆ ಬಿಡುವುದಿಲ್ಲ ಎಂದ ಹಿರಿಯರ ಮಾತನ್ನು ಕೇಳಿ, ಹೆದರಿ ನಾನು ಜೂಗೆ ಹೋಗಲಿಲ್ಲ. ಹೋಗಿದ್ದಿದ್ದರೆ ಜೆಟ್ ವಿಮಾನವನ್ನಲ್ಲದಿದ್ದರೂ ಹಡಗನ್ನಾದರೂ ಹತ್ತಿ ಅಮೆರಿಕಾಕ್ಕೆ ಒಂಟಿಯಾಗಿ ಹೋಗುತ್ತಿದ್ದೆನೋ ? ಏನೋ ? ಗೌಡ ರಷ್ಯಾಕ್ಕೆ ಹೋದ್ದರಿಂದ ಮಲ್ಲಪ್ಪನವರು ತಮ್ಮ ಪೂರ್ವಜನ್ಮದ ಕರ್ಮ ಬಗೆಹರಿಯಿತು ಎಂದು ಸಂತೋಷಪಡುವರಲ್ಲದೆ "ನಮ್ಮ ಗೌಡ ಒಯ್ದಿದ್ದ ದುಡ್ಡಿನ ಜಮಾ ಖರ್ಚು ಕೊಡ್ಲೇ ಜರೂರು ಕಳಸ್ರಿ. ಇನ್ಕಂಟ್ಯಾಕ್ಸಿನವರ ಕಾಟ ಭಾರಿ ಆಗೆದೆ. ವಿಶ್ವಾಸ ಏಕರೀತಿ ಇರಲಿ." ಎಂದು ಅಬ್ರಾಸ್ತಿ ಜೋವ್‌ರವರಿಗೆ ಬರೆಯುವುದು ಖಂಡಿತ.

ಒಂದು ಪಕ್ಷಿ ಮೈನಾ, ಮೈನಾನೇ ಆಗಿದ್ದರೆ ಅದು "ರಾಮ, ರಾಮಾ" ಎಂದುಕೊಂಡಿರುವುದರ ಬದಲು "ನಿಕಿಟ....ನಿಕಿಟಾ...." ಎಂದುಕೊಂಡಿರಬೇಕಲ್ಲಾ ಶಿವಶಿವಾ ! ಎಂದು ಆಸ್ತಿಕ ಮಹಾಶಯರೆಲ್ಲರೂ ಕಳವಳಿಸಬೇಕಾಗುತ್ತದೆ. ಮೈನಾಕ್ಕೆ

ರಷ್ಯನ್ ಹೇಳಿಕೊಡಬೇಕಾನರೂ ಏಕೆ ? ಎಂದು ಅಮೆರಿಕಾದ ಪಕ್ಷಿ ದಯಾಸಂಘದ ಸದಸ್ಯರು ಪ್ರದರ್ಶನಗಳನ್ನು ನಡೆಸುವುದರಲ್ಲಿ ಸಂಶಯವಿಲ್ಲ ಯಾರು ಯಾವ ಪ್ರದರ್ಶನವನ್ನು ಮಾಡಲಿ. ಅದರ ಕರ್ಮವನ್ನು ಅದು ಅನುಭವಿಸಲೇ ಬೇಕು.

ಬರೀ ರಷ್ಯನ್ ಪದಗಳನ್ನೇ ಕಲಿಸುವರೇ ? ಅಥವಾ ಓದುಬರಹಗಳನ್ನೂ ಕಲಿಸುವರೋ ? ಓದುಬರಹಗಳನ್ನು ಕಲಿತರೂ ಸಹ ಅದೇನೂ ಡೋಸ್ಟವೆಸ್ಕಿ ಓದುವಂತಿಲ್ಲ. ಡಾ. ಜಿವಾಗೆ ಓದುವಂತಿಲ್ಲ.

ಮೈನಾ ರಷ್ಯನ್ ಕಲಿತಮೇಲೆ ಪಾಸ್ಟರ್‌ನಾಕರನ್ನು ಕಾಣುವದೇ ?

ಮ್ಯಾಕೋವಸ್ಕಿ, ಎಸೆನಿನ್, ಯಾಷ್ವಿಲಿ, ದಾಬಿದ್ಸೆ, ತ್ಸ್ವೆತೆಯೆವಾ ಮೊದಲಾದವರ ಕೃತಿಗಳನ್ನೋದುವುದೇ ? ಹಾಗೆ ಓದಿದರೆ ಅದರ ಜೀವನ ಪ್ಯಾಸ್ಟರ್ ನಾಕರ ಜೀವನದಂತೆ ದುರ್ಭರ ದುಃಖಮಯವಾಗುವದರಲ್ಲಿ ಸಂಶಯ ವಿಲ್ಲ. ಆ ದುಃಖವನ್ನನುಭವಿಸಲು ಅಲ್ಲಿಗೇಕೆ ಹೋಗಬೇಕು ? ರಷ್ಯನ್ ಏಕೆ ಕಲಿಯಬೇಕು ? ನನ್ನಮಟ್ಟಿಗೆ ಹೇಳುವುದಾದರೆ ನನಗೆ ರಷ್ಯನ್ ಕಲಿತ ಮೈನಾ ಏಕೆ, ಯಾವ ಭಾಷೆಯನ್ನು ಕಲಿತ ಮೈನಾವೂ ಬೇಡ. ಅದನ್ನು ನೋಡದೇ ಇಷ್ಟು ವರ್ಷವೇ ಇದ್ದೇನಂತೆ. ಅದಕ್ಕಿಂತಾ ನಮ್ಮ ಗೌಡನೇ ಮೇಲು. ಆಗಾಗ ಮುಂಡಕ್ಕಿಖಾರವನ್ನಾದರೂ ಕೊಡಿಸುತ್ತಿದ್ದ.

—ಆ. ರಾ. ಸೆ.

ನೇಪಾಳದಲ್ಲಿ ಹೊಸ ಮಂತ್ರಿ ಮಂಡಲ ರಚಿತವಾಗಿದೆಯಂತೆ.
—ಇನ್ನು ಅಲ್ಲಿ ಕೂಡ ಮಾಜಿ ಮಂತ್ರಿಗಳು ಗೋಷಾ ಅನುಸರಿಸುತ್ತಾರೇನೋ?

* * * *

ಯಾವ ನಾಯಕ ಕುಂಟಾದರೇನು,
ಸಂಸ್ಥೆಯ ಟೊಂಕಕ್ಕೇ ಊನ.

* * * *

ಕೊರವಾವಲೋಕನ

ವೈಶಾಖ ಶುದ್ಧ ಪೌರ್ಣಿಮಿ. ಬುದ್ಧನ ಜನ್ಮ ದಿನ. ಬುದ್ಧನಾದ ದಿನ. ಮಹಾಪರಿನಿರ್ವಾಣವನ್ನು ಹೊಂದಿದ ಪುಣ್ಯದಿನ. ಅಹಿಂಸಾ ಪರಮೋಧರ್ಮಃ ಎಂದು ಜಗತ್ತಿಗೆ ಶಾಂತಿಯ ಬೆಳಕನ್ನು ಹರಡಿದ ಭಗವಾನ್ ಬುದ್ಧನ ಪುಣ್ಯತಿಥಿ.

ಷಹರುಗಳ ತರಕಾರಿ ಮಾರುಕಟ್ಟೆಯಲ್ಲಿ ಹೆಸರಿಗೆ ಹಿಂದುಳಿದ, ಮಾತಿನಲ್ಲಿ ಮುಂದಿರುವ ಸ್ತ್ರೀ ವ್ಯಾಪಾರಿಗಳು ಜಗಳದ ನಗ್ನಮಾತುಗಳನ್ನು ಹೇಗೆ ರಸಭರಿತವಾಗಿ ಆಡುತ್ತಾರೆ ನೋಡಿ ಆ ರೀತಿ ಆ ಸಂಜೆ ಕ್ಲಬ್ಬಿನಲ್ಲಿ ಅರವಾಮುದ್ದು ಸೇವಕರ ಮೇಲೆ ಎಗರಿಬೀಳುತ್ತಿದ್ದ ಯಥಾ ಇಚ್ಛಾವಾಗಿ ಬೈದಾಡುತ್ತಿದ್ದ. ಬುದ್ಧ ಸಂದೇಶವನ್ನು ಸಂಜೆ ಸಾರ್ವಜನಿಕ ಉಪನ್ಯಾಸದಲ್ಲಿ ಕೇಳಿ ತಂಪಾಗಿದ್ದ ನಾನು ಕ್ಲಬ್ಬಿಗೆ ಹೋದಾಗ ಈ ದೃಶ್ಯವನ್ನು ಕಂಡೆ. ಹತ್ತಿರ ಹೋಗಿ "ಯಾಕೋ! ಅರವಾಮುದ್ದು! ಶಾಂತಿಯಿಂದ ವರ್ತಿಸು. ಇನ್ನೊಬ್ಬರ ಮನಸ್ಸಿಗೆ ಹಿಂಸೆಯಾಗದಂತೆ ಬಾಳ ನಡೆಸಬೇಕು" ಎಂದು ಉಪದೇಶಿಸಿದೆ.

ನನ್ನ ಮೇಲೇ ರೇಗಿಬಿದ್ದ ಅವ. ಶಾಂತಿಯಂತೇ ಶಾಂತಿ! ಇನ್ನೊಬ್ಬರ ಮನಸ್ಸಿಗೆ ಹಿಂಸೆಯಾಗಬಾರದಂತೆ. ನಿನ್ನ ತಲೆ! ನನ್ನ ನಾಲಿಗೆಗೆ ಹಿಂಸೆಮಾಡ್ತಾ ಇದ್ದಾನೆ ಈ ಸೇವಕ. ಅವನ ದೇಹಕ್ಕೇ ಹಿಂಸೆ ಮಾಡಬೇಕು!" ಅಂತಂದ.

"ಏನು ಮಾಡಿದನೋ ಅಂಥಾದ್ದು" ಅಂದೆ.

"ಏನು ಮಾಡೋದೇನು?—ಮಾತಿನ ಭರದಲ್ಲಿ ಒಂದು ನಿಮಿಷ ಮೂಕನಾಗಿ ಮತ್ತೆ ಹೇಳಿದ.

"ಥಂಡಿ ಸೋಡಾ ಹಾಕಿ ತೆಗೆದುಕೊಂಡು ಬಾ ಅಂದರೆ ಬಿಸಿ ಸೋಡಾ ಹಾಕಿ ತಂದಿದ್ದಾನೆ ಪಾಪಿ! ಅವನಿಗೆ ರೌರವಾದಿ ನರಕ ಪ್ರಾಪ್ತಿಯಾಗಲೀ!" ಎಂದ.

"ಅಲ್ಲಕಣೋ ಅರವಾಮೊದ್ದು. ಇವತ್ತು ಬುದ್ಧ ಪೌರ್ಣಿಮಾ. ಇವತ್ತೂ ಅಮುಲೇರಬೇಕೇನೋ? ದೇವರ ಚಿಂತೆ ಮಾಡಬಾರದೇ"" ಎಂದೆ.

ಅಷ್ಟುಹೊತ್ತಿಗೆ ಅವನ ಕೈಲಿದ್ದ ಲೋಟಾ ಖಾಲಿಯಾಗಿತ್ತು. ಸ್ವಲ್ಪಮಟ್ಟಿಗೆ ಶಾಂತಿ ತಲೆದೋರಿತ್ತು ಅವನ ಮುಖದ ಮೇಲೆ. ಆಗ ಅವ

ನನ್ನ ನಿನ್ನ ನಮ್ಮೆಲ್ಲ
ಜನರಿಗೆ ಶತ್ರು ಮದ್ಯ !
ಬುದ್ಧನು ಅಂದೇ ಸಾರಿದನಲ್ಲ
ಶತ್ರುಗಳೆಲ್ಲರ ಪ್ರೇಮಿಸಿ ಆದ್ಯ !!

ಎಂದು ನನಗೇ ಬುದ್ಧಿ ಪದ್ಯ ಹಾಡಲಾರಂಭಿಸಿದ.

* * * *

"ಬೇರರ್ ಶಕುಂತಳಾನ ಕರೀ" ಅಂತಂದ ಕೊರವ. ಬದರಿ ಪ್ರಯಾಣಕ್ಕೆಂದು ಮೂರು ತಿಂಗಳು ಉತ್ತರ ಹಿಂದೂಸ್ಥಾನದಲ್ಲೆಲ್ಲಾ ಸುತ್ತಿ ಆ ದಿನ ಊರಿಗೆ ಬಂದಿದ್ದೆ. ಆ ಸಂಜೆ ತಾನೇ ಕ್ಲಬ್ಬಿಗೆ ಹೋಗಿದ್ದೆ. ಈ ಮೂರು ತಿಂಗಳಿನಲ್ಲಿ ಸಂಜೆ ಕ್ಲಬ್ಬುಗಳಲ್ಲಿ ಹೆಣ್ಣುಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡುಬಿಟ್ಟರೇ! ಏನನ್ಯಾಯ! ಅವರೆದುರಿಗೆ ನಾವು ಬಾಯಿಬಿಚ್ಚಿ ಮನಸ್ಸಿಗೆ ಬಂದಿದ್ದನ್ನು ಆಡೋಹಾಗೂ ಇಲ್ಲ. ಅಂದಮೇಲೆ ಕ್ಲಬ್ಬಿಗೆ ಏಕೆ ಬರಬೇಕು? ಮನೇಲೇ ಇರಬಹುದಲ್ಲಾ! ಎಂದೆಲ್ಲಾ ಅನ್ನಿಸಿತು.

ಆ ವೇಳೆಗೆ ೪೦–೫೦ರ ಪ್ರಾಯದ ಪಾಯಿಜಾಮ ಹಾಕಿದ, ಪಂಜಾಬಿ ಹೆಂಗಸರ ಉದ್ದಾನೆ ರವಿಕೆ–ಷರ್ಟು ಧರಿಸಿದ, ಹೆಣ್ಣು ಮುಖವಿದ್ದ, ನಿಲುಗೂದಲುಬಿಟ್ಟ, ಆದರೂ ಮೀಸೆ ಇದ್ದ ನೌಕರನೊಬ್ಬ ಬಂದು ಕೊರವನೆದುರಿಗೆ ನಿಂತ. ಕೊರವ ಕೊಟ್ಟ ಹಣ ತೆಗೆದುಕೊಂಡು ಈಗಲೇ ರಸೀತಿ ತಂದು ಕೊಡ್ತೀನಿ ಸಾರ್ ಎಂದು ಕೀಕಲ ಧ್ವನಿಯಲ್ಲಿ ಹೇಳಿ ಹಿಂತಿರುಗಿ ಹೋದ. ನಮ್ಮ ಹಳೇ ಅಕೌಂಟ್ಸ್ ಕ್ಲಾರ್ಕು!

ನಾನು ಅವನ ಕಡೆ ಒಂದು ಕಣ್ಣು ಕೊರವನ ಕಡೆಗೆ ಒಂದು ಕಣ್ಣು ಇಟ್ಟು, ಕಾಕದೃಷ್ಟಿಯವನಂತಾಗಿ ಹುಬ್ಬನ್ನು ಕ್ರಾಪಿನ ಅಂಚಿನತ್ತ ಸಾಗಿಸಿದೆ. "ಶಕುಂತಲಾ ಬರಹೇಳು ಅಂತ ನೀನಂದರೆ ಈ ಹೆಣ್ಣಾಪುಸಕಿ ಲೆಕ್ಕದ ಕ್ಲಾರ್ಕ್ ಬಂದನಲ್ಲಾ! ಅರ್ಥವಾಗಲಿಲ್ಲ" ಅಂದೆ.

ಆಗ ಕೊರವ ವಿಶದೀಕರಿಸಿದ. "ನೋಡು ಮಗು ಎರಡು ತಿಂಗಳ ಹಿಂದೆ ನಮ್ಮಾಕೆ ತೋಳದಂತೆ ತಿನ್ನುತ್ತ ಹೊರವಾಗಿ ಬೆಳೆದ ನಾಯೊಂದನ್ನು ಸಾಕಲು ಶುರು ಹಚ್ಚಿದಳು. ಒಂಟಿ ಮನೆ, ಕಳ್ಳರಕಾಟ ಹೆಚ್ಚು, ಕಾವಲಿಗೊಂದು ನಾಯಿದ್ದರೆ ನಮಗೆ ಧೈರ್ಯ ಎಂದೆಲ್ಲಾ ನೆಪ ಹೂಡಿ ನಾಯನ್ನು ಸಾಕಿದಳು. ಬಲು ಪ್ರೀತಿಯಿಂದ ಸಾಕಿದಳು. ಹೆಣ್ಣುನಾಯಿ! ಪರವಾಗಿಲ್ಲ! ಹೆಣ್ಣುಮಕ್ಕಳಿಲ್ಲ ನಮಗೆ ಎಂತ

ನಾನೂ ಸುಮ್ಮನಿದ್ದೆ. 'ಏನು ಹೆಸರಿಡೋಣ ಅಂದ್ರೆ' ಅಂತ ಕಾಳಿದಾಸನ ಜಯಂತಿ ದಿವಸ ಕೇಳಿದಳು. ಆ ಹಾಳು ನಾಯೋ ಯಾವ ಮರದ ಹತ್ತಿರ ಯಾವ ಗಂಡು ನಾಯಿ ಓಡಾಡಿದರೂ, ದುಷ್ಯಂತ ದುಷ್ಯಂತ ಅಂತ ಬೊಗಳುಕ್ಕೆ ಶುರು ಹಚ್ಚಿತ್ತು. ಅದಕ್ಕೋಸ್ಕರ ಹಾಗೂ ಇವಳನ್ನು ರೇಗಿಸೋಣ ಅಂತ ಶಕುಂತಲಾ ಅಂತ ಹೆಸರಿಡೋಣ ಕಣೆ ಅಂತ ಸಲಹೆಮಾಡಿದೆ. "ಬಲು ಮುದ್ದಾದ ಹೆಸರು ಅಂದ್ರೆ. ಆ ಹೆಸರನ್ನೇ ಇಡೋಣ ಅಂದ್ರೆ" ಅಂತ ಕಾಳಿದಾಸನ ಜಯಂತಿ ದಿವಸ ಆ ನಾಯಿಗೆ 'ಶಕುಂತಲಾ' ಅಂತ ನಾಮಕರಣ ಮಾಡಿದಳು. ನಾಮಕರಣವಾದ ೩ ತಿಂಗಳಾಗಿದ್ದಿರಬಹುದು. ಒಂದು ರಾತ್ರಿ ಹಿತ್ತಲ ಕಡೆ ಏನೋ ಶಬ್ದ ಆದ ಹಾಗೆ ಆಯಿತು. ನಾನು ಎದ್ದೆ. ಈಕೇನೂ ಎದ್ದಳು. ಕಳ್ಳರು ಅಂದ್ರೆ ಅಂತ ಪಿಸುಗುಟ್ಟಿದಳು. ಮಹಡಿ ಮೇಲೆ ಮಲಗಿದ್ದೆವು. ತೆಗೆದ ಕಿಟಕಿಯಿಂದ ನೋಡಿದೆವು. ಹಿತ್ತಲೆಲ್ಲಾ ಕತ್ತಲು. ಕಗ್ಗತ್ತಲು. ಆದರೆ ಹಿತ್ತಲ ಕಡೆಯಲ್ಲಿದ್ದ ಸೌದೆ ಮನೆ ಬಾಗಿಲು ತೆಗೆದಿದೆ. ಅ ಸೌದೆ ಮನೇಲಿ ಬೇಡದ ಹಳೇ ಸಾಮಾನುಗಳ ಟ್ರಂಕುಗಳನ್ನೆಲ್ಲಾ ಇರಿಸಿದ್ದೆವು. ಆ ಟ್ರಂಕಿನ ಎದುರಿಗೆ ಒಬ್ಬ ಧಡೂತಿ ಕಳ್ಳ ಕೂತು ಬೀಗ ಒಡೆಯಲು ಪ್ರಯತ್ನಪಡುತ್ತಿದ್ದ. ಹಳೇಕಾಲದ ಬೀಗ ಒಡೆಯುವುದು ಸುಲಭವಲ್ಲ!

"ಹಾಳು ಶಕುಂತಳ ಎಲ್ಲಿ ಹೋಯಿತೋ, ಕಳ್ಳ ಬಂದರೆ ಬೊಗಳಬೇಡವೇ ಅಂದ್ರೆ" ಅಂತ ಈಕೆ ಪಿಸುಮಾತನ್ನಾಡಿದಳು.

ಕಳ್ಳನ ಎದುರಿಗೆ ಇರುವ ಟ್ರಂಕಿನ ಬೀಗದ ಮೇಲೆ ಬೆಳಕು ಬೀಳುತ್ತಿದೆ. ಈ ಕತ್ತಲೆಯಲ್ಲಿ ಚೆನ್ನಾಗಿ ಕಾಣುತ್ತೆ ನೋಡು ಎಂದೆ. ಹ್ಞೂ ಅಂದ್ರೆ ಕಾಣುತ್ತೆ ಟಾರ್ಚಿನಿಂದ ಬೆಳಕು ಬರ್ತಾ ಇದೆ ಅಂದ್ರೆ ಅಂದಳು.

"ಹಾಳು ಶಕುಂತಳ ಎಲ್ಲಿ ಹೋಯಿತೋ, ಕಳ್ಳ ಬಂದರೆ ಬೊಗಳಬೇಡವೇ ಅಂದ್ರೆ" ಅಂತ ಈಕೆ ಪಿಸುಮಾತನ್ನಾಡಿದಳು.

ಕಳ್ಳನ ಎದುರಿಗೆ ಇರುವ ಟ್ರಂಕಿನ ಬೀಗದ ಮೇಲೆ ಬೆಳಕು ಬೀಳುತ್ತಿದೆ. ಈ ಕಗ್ಗತ್ತಲೆಯಲ್ಲಿ ಚೆನ್ನಾಗಿ ಕಾಣುತ್ತೆ ನೋಡು ಎಂದೆ. ಹ್ಞೂ ಅಂದ್ರೆ. ಕಾಣುತ್ತೆ ಆ ಟಾರ್ಚಿನಿಂದ ಬೆಳಕು ಬರ್ತಾ ಇದೆ ಅಂದ್ರೆ ಅಂದಳು.

ಇಷ್ಟು ಕಾಣಿಸಿತಲ್ಲ ಈ ಕಾಮಾಕ್ಷಿಗೆ ಅಂತ ಸಂತೋಷಪಟ್ಟುಕೊಂಡು ಟಾರ್ಚನ್ನು ಯಾರು ಹಿಡಿದುಕೊಂಡಿದ್ದಾರೆ ನೋಡು ಅಂದೆ.

"ಇದೇನೂ ಅಂದ್ರೆ! ಆ ಹಾಳು ನಾಯಿ ಬಾಯಲ್ಲಿ ಟಾರ್ಚನ್ನು ಕಚ್ಚಿಕೊಂಡು ಬೀಗದಮೇಲೆ ಬೆಳಕು ಚೆಲ್ಲುತ್ತಾ ಕಳ್ಳನಿಗೆ ಸಹಾಯ ಮಾಡ್ತಾ ಇದೆ. ಎಂಥಾ

ದ್ರೋಹಿ ಮುಂಡೇದು ಅಂದ್ರೆ. ನನ್ನ ಕೈಲಿ ಅನ್ನ ತಿಂದು, ತಿಂದ ಬಾಯಲ್ಲೇ ಕಳ್ಳನ ಟಾರ್ಚು ಚೀಪುತ್ತಾ ಅವನಿಗೆ ಸಹಾಯ ಮಾಡುತ್ತಲ್ಲಾ ಅಂದ್ರೆ"

'ಲೋಕವೇ ಹೀಗೆ ಕಣೆ. ಕಳ್ಳ ಟ್ರಂಕಿನ ಜತೆಗೆ ಶಕುಂತಳನನ್ನೂ ಕದ್ದುಕೊಂಡು ಹೋಗಬಹುದು. ಸುಮ್ಮನೆ ನಾವು ಮಲಗಿಕೊಳ್ಳೋಣ. ಕಳ್ಳ ಧಡೂತಿಯಾಗಿದ್ದಾನೆ. ಏನಾದರೂ ಗಲಾಟೆ ಮಾಡಿದರೆ ನಮಗೆ ಅಪಾಯ ಹೇಗೂ ಆ ಟ್ರಂಕನ್ನು ಅವ ಒಡೆಯಲಾರದೆ ಸಾಗಿಸಿದರೆ ಅಷ್ಟು ಜಿರಳೆ ಸಂಸಾರ ನಮ್ಮನೆಯಿಂದ ಹೊರ ಬಿದ್ದ ಹಾಗಾಗುತ್ತೆ".

ಅಂತ ಹೇಳಿ ಮಲಗಿದೆ ಆ ರಾತ್ರಿ.

ಮಾರನೆಯ ದಿನ ಕ್ಲಬ್ಬಿಗೆ ಬಂದರೆ ೩೦೦ ರೂಪಾಯಿ ಛಪಾವಣೆಯಾಗಿತ್ತು.

ಆ ಹಿರಿಯ ಬೇರರಿದ್ದ ಒಬ್ಬ ನೋಡು ಜಾನ್ನಿಕಲ್ ಅಂತ, ಅವ (ಅಕೌಂಟ್ಸ್ ಕ್ಲಾರ್ಕ್ ಎದುರಿಗಿರುವಾಗಲೇ) ಆ ಹಣವನ್ನು ಸೆಕ್ರೆಟರಿ ಹೇಳಿದ್ದಾರೆ ಅಂತ ಹೇಳಿ ಲಪಟಾಯಿಸಿಕೊಂಡು ಹೋಗಿದ್ದ ಈ ಅಕೌಂಟ್ಸ್ ಕ್ಲಾರ್ಕ್‌ನ ಕೇಳಿದರೆ. ನಾನಿದ್ದೆ ಸಾರ್ ಅಲ್ಲೇನೆ. ಆದರೆ ಅವ ಹೀಗೆ ಮೋಸ ಮಾಡ್ತಾನೆ ಅಂತ ಗೊತ್ತಾಗಲಿಲ್ಲ ಸಾರ್, ಗೊತ್ತಾಗಿದ್ದರೆ ಹಣದ ಪೆಟ್ಟಿಗೆಯ ಬೀಗದ ಕೈಯನ್ನು ನೆಕ್ರೆಟರಿಗಳ ಮೇಜಿನಿಂದ ತೆಗೆದು ಕೊಡುತ್ತಿತ್ತಿಲ್ಲ ಸಾರ್" ಎಂದ.

ಆಗ ಕಾವಲು ನಾಯಿಯ ನೆನಪಾಯಿತು. ಕಾರ್ಯಕಾರಿ ಸಮಿತಿಯವರಿಗೆ ಹಿಂದಿನ ರಾತ್ರಿ ನಮ್ಮನೆಯಲಾದುದನ್ನು ವಿವರಿಸಿ ಹಣದ ಪೆಟ್ಟಿಗೆ ಹೋದ ಮೇಲೆ ಅಕೌಂಟ್ಸ್ ಕ್ಲಾರ್ಕಿನ ಕಂಬಳಿ ಕಿತ್ತುಕೊಂಡು ಏನು ಶಾನೇ ಮಾಡೋದು ಅಂತ ಹೇಳಿ, ಇವನಿಗೆ ಶಕುಂತಲಾ ಅಂತ ನಾಮಕರಣ ಮಾಡೋಣ. ಅದೇ ಅವನಿಗೆ ಶಿಕ್ಷೆ ಅಂತ ಹೇಳಿದೆ,

ಎಲ್ಲರೂ ಒಪ್ಪಿದರು. ಅಂತ ಹೇಳಿದ.

"ಬಿಡು ಕೊರವ ಅಷ್ಟೆಲ್ಲಾ ಜಾಣ ಅಂತ ಜಂಬ ಕೊಚ್ಚಿಕೋತಾ ಇದ್ದೆ. ನೀನು ಅಧ್ಯಕ್ಷನಾಗಿದ್ದಾಗಲೇ ಛಪಾವಣೆ ಆಯ್ತಲ್ಲ !" ಎಂದೆ

ಅಂತಹ ಗಾಂಧೀಜಿಗೆ .ಗೋಡ್ಸೆ ತಪ್ಪಲಿಲ್ಲ. ಇನ್ನು ನನ್ನಂಥ ಅಧ್ಯಕ್ಷನಿಗೆ ಅಂತಹ ಬೇರರ್ ಸಿಕ್ಕಿದ್ದು ಏನಾಶ್ಚರ್ಯ ! "ಎಂದ.


ಒಮ್ಮೆ ಉಪಯೋಗಿಸಿ ನೋಡಿ—
ಎಷ್ಟು ಸುಂದರ ಉಜ್ವಲ ಪೆಯಿಂಟಿದು !
ಶಾಲಿಮಾರ್ ಸೂಪರ್‌ಲ್ಯಾಕ್ ಸಿಂಥೆಟಿಕ್ ಎನಾಮೆಲ್— ಇದೊಂದು ಶೀಘ್ರದಲ್ಲಿ ಗಟ್ಟಿಯಾಗಿ ಒಣಗುವ, ಬಹಳವಾಗಿ ಥಳಥಳಿಸುವ, ನಿಶ್ಚಿತ ಬಾಳಿಕೆಯಿರುವ, ಒಳಭಾಗಕ್ಕೂ ಅಥವಾ ಹೊರಭಾಗಕ್ಕೂ ಉಪಯೋಗಿಸಬಹುದಾದ ಪೆಯಿಂಟಾಗಿದೆ. ಇದನ್ನು ಮನೆಯಲ್ಲಿಯ ಮತ್ತು ಕಾರ್ಖಾನೆಯಲ್ಲಿಯ ಎಲ್ಲಾ ತೆರನಾದ ಜಾಗಗಳ ಮೇಲೆ ಬ್ರಶ್ಶಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ "ಡಿಪ್" ಮಾಡಿ ಹಚ್ಚಬಹುದು.
38 ಬಣ್ಣಗಳು—ಒಂದರೊಂದಿಗೆ ಮತ್ತೊಂದನ್ನು ಕಲಸಬಹುದು. 1 ಪೈಂಟ್ ಮತ್ತು 1 ಗ್ಯಾಲನಿನ ಟಿನ್ನುಗಳಲ್ಲಿ ಹಾಗೂ 5 ಗ್ಯಾಲನಿನ ಡ್ರಮ್ಮುಗಳಲ್ಲಿ ದೊರೆಯುತ್ತೆ
SHALIMAR
ಶಾಲಿಮಾರ್
ಸೂಪರ್‌ಲ್ಯಾಕ್
ಸಿಂಥೆಟಿಕ್ ಎನಾಮೆಲ್
SPW 498 KN
SHALIMAR PAINT, COLOUR & VARNISH CO., PRIVATE LTD.
Calcutta - Bombay - Madras - New Delhi - Kanpur
SHALIMAR